ಸಂಪುಟ 01 । ಸಂಚಿಕೆ 191 । ಶನಿವಾರ 06 ಜೂನ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರು,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581
ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವೆಂಕಟೇಶ ಅಯ್ಯಂಗಾರ್ ರವರ ಜನ್ಮದಿನ** ಹಾಗೂ ಪುಣ್ಯ ಸ್ಮರಣೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ರವರ ಜನ್ಮದಿನ ಹಾಗೂ ಪುಣ್ಯತಿಥಿಯು ಒಂದೇ ದಿನಾಂಕದಂದು (ಜೂನ್ 6) ಬರುತ್ತದೆ. ಅವರು ಜೂನ್ 6, 1891 ರಂದು ಜನಿಸಿ, ಜೂನ್ 6, 1986 ರಂದು ನಿಧನರಾದರು. ಅವರನ್ನು 'ಕನ್ನಡ ಸಣ್ಣ ಕಥೆಗಳ ಪಿತಾಮಹ' ಮತ್ತು 'ಮಾಸ್ತಿ ಕನ್ನಡದ ಆಸ್ತಿ' ಎಂದು ಪ್ರೀತಿಯಿಂದ ಕರೆಯಲಾಗುತ್ತದೆ.

**2) ವಿಶ್ವ ಕೀಟ ದಿನ**
ಪ್ರತಿ ವರ್ಷ ಜೂನ್ 6 ರಂದು ವಿಶ್ವ ಕೀಟ ದಿನವನ್ನು (World Pest Day) ಜಾಗತಿಕವಾಗಿ ಆಚರಿಸಲಾಗುತ್ತದೆ. ಸಾರ್ವಜನಿಕ ಆರೋಗ್ಯ, ಆಹಾರ ಸುರಕ್ಷತೆ ಮತ್ತು ನೈರ್ಮಲ್ಯವನ್ನು ಕಾಪಾಡುವಲ್ಲಿ ಕೀಟ ನಿರ್ವಹಣೆಯ (Pest Control) ಮಹತ್ವದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.

**3) ಡಿ. ದೇವರಾಜ ಅರಸು ಅವರ ಪುಣ್ಯ ಸ್ಮರಣೆ**
ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹಾಗೂ ಸಾಮಾಜಿಕ ನ್ಯಾಯದ ಹರಿಕಾರ ಡಿ. ದೇವರಾಜ ಅರಸು ಅವರ ಪುಣ್ಯಸ್ಮರಣೆಯನ್ನು ಪ್ರತಿ ವರ್ಷ ಜೂನ್ 6 ರಂದು ಆಚರಿಸಲಾಗುತ್ತದೆ. ಅವರು ರಾಜ್ಯದ ಹಿಂದುಳಿದ ವರ್ಗಗಳು, ದಲಿತರು ಮತ್ತು ಶೋಷಿತ ಸಮುದಾಯಗಳ ಏಳಿಗೆಗಾಗಿ ಅವಿರತವಾಗಿ ಶ್ರಮಿಸಿದ ಮಹಾನ್ ನಾಯಕರು

## ಸುಭಾಷಿತ

ನನ್ನಿಂದ ಇದು ಸಾಧ್ಯವಿಲ್ಲ ಎಂದುಕೊಳ್ಳಬೇಡಿ. ನಾನಿದನ್ನು ಮಾಡಬಲ್ಲೆ ಎಂಬ ಆತ್ಮವಿಶ್ವಾಸವೇ ನಿಮ್ಮನ್ನು ಮುನ್ನಡೆಸಬಲ್ಲದು.

–ಸ್ವಾಮಿ ವಿವೇಕಾನಂದ

# ಸನ್ ರೈಸ್ ಕಾಲೇಜು ವತಿಯಿಂದ ವಿಶ್ವ ಪರಿಸರ ದಿನಾಚರಣೆ ಹಾಗೂ ಪರಿಸರ ಹಬ್ಬ

◆ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸನ್‌ರೈಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಸ್ಟೂಡೆಂಟ್ ನರ್ಸ್ ಅಸೋಸಿಯೇಷನ್ (SNA), ವನಸಿರಿ ಫೌಂಡೇಶನ್ ಹಾಗೂ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ (MCH) ಇವರ ಸಂಂ–ಯುಕ್ತ ಆಶ್ರಯದಲ್ಲಿ "ಪರಿಸರ ಆರೋಗ್ಯ ಹಬ್ಬ" ಕಾರ್ಯಕ್ರಮವನ್ನು ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನ ಸನ್‌ರೈಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನಿಂದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯವರೆಗೆ ಪರಿಸರ ಜಾಗೃತಿ ಮೆರವಣಿಗೆ ಹಮ್ಮಿಕೊಳ್ಳಲಾಯಿತು. ವಿದ್ಯಾರ್ಥಿಗಳು, ಉಪನ್ಯಾಸಕರು, ಎಸ್–ಎನ್‌ಎ ಸದಸ್ಯರು ಹಾಗೂ ವನಸಿರಿ ಫೌಂಡೇಶನ್ ಕಾರ್ಯಕರ್ತರು ಕೈಯಲ್ಲಿ ವಿವಿಧ ಜಾತಿಯ ಗಿಡಗಳನ್ನು ಹಿಡಿದು ಪರಿಸರ ಸಂರಕ್ಷಣೆಯ ಸಂದೇಶ ಸಾರಿದರು. "ಪರಿಸರ ಉಳಿಸಿ ? ಭವಿಷ್ಯ ಉಳಿಸಿ", "ಹಸಿರು ಬೆಳೆಸೋಣ ಆರೋಗ್ಯ ಕಾಪಾಡೋಣ" ಎಂಬ ಘೋಷಣೆಗಳನ್ನು ಕೂಗುತ್ತ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ಮೆರವಣಿಗೆಯು ಸಾರ್ವಜನಿಕರ ಗಮನ ಸೆಳೆಯಿತು. ಬಳಿಕ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕಾರ್ಯಕ್ರಮವು ಪೂಜ್ಯ ಶ್ರೀ ಸದಾನಂದ ಶರಣರ ದಿವ್ಯ ಸಾನಿಧ್ಯದಲ್ಲಿ ನೆರವೇರಿತು. ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಾದ ಡಾ. ಕಾವೇರಿ ಅವರು ಸಸಿಗೆ ನೀರೆರೆಯುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಸಾಮಾಜಿ–





ಕ ಜವಾಬ್ದಾರಿಯಾಗಿದ್ದು, ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಸ್ವಚ್ಛ ಹಾಗೂ ಹಸಿರು ಪರಿಸರ ಅತ್ಯಗತ್ಯವಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಇರ್ಷಾದ್ ಕೆ. ಅತ್ತಾರ್ ಅವರು ಪರಿಸರ ಮಾಲಿನ್ಯದಿಂದ ಉಂಟಾಗುತ್ತಿರುವ ಸಮಸ್ಯೆಗಳ ಕುರಿತು ವಿವರಿಸಿ, ಪರಿಸರ ಸಂರಕ್ಷಣೆಯಲ್ಲಿ ಯುವಜನರ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಮುಖ್ಯ ರೂವಾ–ರಿಯಾಗಿದ್ದ ವನಸಿರಿ ಫೌಂಡೇಶನ್ ಅಧ್ಯಕ್ಷ ಅಮರೇಗೌಡ ಮಲ್ಲಾಪುರ ಅವರು ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದರ ಪೋಷಣೆಯ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಕನ್ನಡಪರ ಹೋರಾಟಗಾರ ಮಂಜುನಾಥ್ ಗಾಣಿಗೇರ್ ಅವರು ಮಾತನಾಡಿ, ಪರಿಸರ ಸಂರಕ್ಷಣೆ ಕೇವಲ ಒಂದು ದಿನದ ಆಚ–'ರಣೆಯಾಗದೆ ಜೀವನಶೈಲಿಯಾಗಬೇಕು ಎಂದು ಅಭಿಪ್ರಾಯಪಟ್ಟರು. ಅಜೀಂ ಪ್ರೇಮ್‌ಜಿ ಫೌಂಡೇಶನ್ ತಂಡದ ಕೃಷ್ಣೇಗೌಡ ಹಾಗೂ ಭಾರತ ಮೇಡಂ ಅವರು ಪರಿಸರ ಮತ್ತು ಆರೋಗ್ಯದ ಅವಿನಾಭಾವ ಸಂಬಂಧದ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆಯ ಪ್ರತಿಜ್ಞೆಯನ್ನು ಸ್ವೀಕ–ರಿಸಲಾಯಿತು ಹಾಗೂ ಗಿಡ ನೆಡುವ ಮೂಲಕ ಪರಿಸರ ಕಾಳಜಿಯ ಸಂದೇಶ ಸಾರಲಾಯಿತು. ವಿದ್ಯಾರ್ಥಿಗಳು ಪರಿಸರ ಜಾಗೃತಿ ಮೂಡಿಸುವ ವಿವಿಧ ಘೋಷಣೆಗಳ ಮೂಲಕ ಜನರಲ್ಲಿ ಅರಿವು ಮೂಡಿಸಿದರು. ಕಾರ್ಯಕ್ರಮದ ಯಶಸ್ಸಿಗೆ ಎಸ್‌ಎನ್‌ಎ ಸದಸ್ಯರಾದ ಪ್ರವೀಣ್ ಕುಮಾರ್, ಸ್ಫೂರ್ತಿ, ಭರತ್, ಅಶ್ವಿನಿ ಹಾಗೂ ಶೇಖ್ ಶಾವಲಿ ಅವರು ವಿಶೇಷವಾಗಿ ಶ್ರಮಿಸಿದರು. ಸನ್‌ರೈಸ್ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಜಿ. ಅವರು ಅತಿಥಿಗಳನ್ನು ಸ್ವಾಗತಿಸಿ, ಕಾರ್ಯಕ್ರಮದ ಉದ್ದೇಶ ಹಾಗೂ ಪರಿಸರ ಸಂರಕ್ಷಣೆಯ ಅಗತ್ಯತೆಯನ್ನು ವಿವರಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಉಪನ್ಯಾಸಕರಾದ ವೀರೇಶ್ ಅವರು ನಿರ್ವಹಿಸಿದರು. ಈ ಸಂದರ್ಭದಲ್ಲಿ ಉಪನ್ಯಾಸಕರು, ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಪರಿಸರ ಸಂರಕ್ಷಣೆ, ಆರೋಗ್ಯಕರ ಜೀವನ ಹಾಗೂ ಹಸಿರು ಭವಿಷ್ಯದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಲ್ಲಿ ಈ ಕಾರ್ಯಕ್ರಮವು ಮಹತ್ವದ ಪಾತ್ರ ವಹಿಸಿತು.




## ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ, ಮರಗಿಡಗಳನ್ನು ರಕ್ಷಿಸಿ:ರವಿಕುಮಾರ ಮುಖ್ಯಗುರು

◆ ನೈಜ್ಯ ದೆಸೆ ನ್ಯೂಸ್

ಮಸ್ಕಿ : ತಾಲ್ಲೂಕಿನ ಹಾಲಾಪೂರದ ದಿ ಬೆಸ್ಟ್ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿ ನಡೆಸಿ, ಸರಸ್ವತಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ನಂತರ ಮುಖ್ಯಗುರು ರವಿಕುಮಾರ ತೊರಣದಿನ್ನಿ ಮಾತನಾಡಿ ಇಂದು ವಿಶ್ವ ಪರಿಸರ ದಿನ,ನಾವೆಲ್ಲರೂ ಪರಿಸರ ಸಂರಕ್ಷಣೆ ಜಾಗೃತಿ ಮುಡಿಸುವುದು ನಮ್ಮ ಜವಾಬ್ದಾರಿ ,

ಇದು ಕೇವಲ ಆಚರಣೆ ಒಂದು ದಿನ ಆಗದೆ,ನಿರಂತರವಾಗಿ ನಡೆಯಲಿ,1974 ರಂದು ಅಧಿಕೃತವಾಗಿ ವಿಶ್ವ ಪರಿಸರ ದಿನ ಆಚರಣೆ ಜಾ–ರಿಗೆ ಬಂತು, ಮತ್ತಷ್ಟು ಪರಿಸರ ಕಾಳಜಿ ಹೆಚ್ಚಾಗಿದ್ದು, ಹಾಗೆ ಪ್ಲಾಸ್ಟಿಕ್ ನಿರ್ಮೂಲನೆ ಮಾಡಬೇಕು,ಮಕ್ಕಳು



ಆಚರಿಸುವ ಹುಟ್ಟು ಹಬ್ಬದ ದುಂದು ವೆಚ್ಚ ಕಡಿತಗೊಳಿಸಿ, ಅದರ ಬದಲಾಗಿ ಗಿಡಗಳನ್ನು ನಡೆವ,ಕೊಡುವ ರೂಡಿ ಮೈಗೂಡಿಸಿ ಪರಿಸರಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ತಿಳಿಸಿದರು.ಮಕ್ಕಳಿಗೆ ಪರಿಸರ ಚಿತ್ರಕಲೆ ಏರ್ಪಡಿಸಿ ಬಹುಮಾನ ವಿತರಿಸಿದರು.ಈ ವೇಳೆಯಲ್ಲಿ ಸಂಸ್ಥೆಯ ಉಪಾಧ್ಯಕ್ಷ ಕೆ ಶೇಖರಪ್ಪ, ಕಾರ್ಯದರ್ಶಿ ಸಿದ್ದು ಬಿ, ಪ್ರಾಥಮಿಕ ವಿಭಾಗ ಮುಖ್ಯಗುರು ಕುಮಾರ ಮಸ್ಕಿ, ಶಿಕ್ಷಕರಾದ ಕೃಷ್ಣಮೂರ್ತಿ, ದೇವೆಂದ್ರಕುಮಾರ, ಕುಪ್ಪಣ್ಣ, ಭೀರಪ್ಪ ,ಅಭೀಷೇಕ, ಶಿಕ್ಷಕಿಂ–ಯರಾದ ವಿದ್ಯಾಶ್ರಿ, ಮಮತಾರಾಣಿ, ದುರ್ಗಾ ಹಾಗೂ ಇನ್ನಿತರರು ಇದ್ದರು.

## ಗ್ರಾ ಪಂ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ಹೀರಾದಲ್ಲಿ ವಿಶ್ವ ಪರಿಸರ ದಿನಾಚರಣೆ

◆ ನೈಜ್ಯ ದೆಸೆ ನ್ಯೂಸ್

/ಹೀರಾ : "ಅರಿವು ಕೇಂದ್ರ" ಗ್ರಾ ಪಂ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ಹೀರಾದಲ್ಲಿ ವಿಶ್ವ ಪರಿಸರ ದಿನಾಚರಣೆ ಯನ್ನು ಆಚರಿಸಲಾಯಿತು.. ಮತ್ತು ಗ್ರಂಥಾಲಯ ಆವರಣದಲ್ಲಿ ಸಸಿಯನ್ನು ನೆಡಲಾಯಿತು.. ಈ ಸಂದರ್ಭದಲ್ಲಿ "ಮೈರಾಡ್ ಭಾರತಿ"ಪ್ರಗತಿ ವಾಟರ್ ಶೇಡ ರಾಯಚೂರು ಅಧಿಕಾ–ರಿಗಳಾದ ಸಂಗಮೇಶ ಇವರು ಪರಿಸರದ ಬಗ್ಗೆ ಮಾತನಾಡಿ ಗ್ರಂಥಾಲಯ ಸದುಪಯೋಗ ಪಡೆದುಕೊಳ್ಳುವ ಬಗ್ಗೆ ಜನರಿಗೆ ತಿಳಿಸಿದರು ಮತ್ತು ಶಿವಬಸನಗೌಡ ಇಂಜಿನಿಯರ್ ಹಾಗೂ ಹುಸೇನಪ್ಪ ಮ್ಯಾನೇಜರ್ ಮತ್ತು ಗ್ರಂಥಾಲಯ ಮೇಲ್ವಿಚಾರಕಾರದ ಶ್ರೀ ಬಸವರಾಜ ದೊಡ್ಡಮನೆ ಹೀರಾ ಹಾಗೂ ಪಂಚಾಯಿತಿ ಕಾರ್ಯದರ್ಶಿಗಳಾದ ಹುಲಗಪ್ಪ ಮತ್ತು




ಪಂಚಾಯಿತಿ ಆಪರೇಟ್ರಾದ ಆಶಾಣ್ಣ ಮತ್ತು ಗ್ರಾಮ ಆಡಳಿತ ಅಧಿಕಾರಿಗಳಾದ ಸದಾಕಲಿ ಹೀರಾ ಹಾಗೂ ಶ್ರೀ ಮುದೆಪ್ಪ ದೊಡ್ಡಮನಿ ದಳಪತಿ ಹೀರಾ ಹಾಗೂ ಸಿದ್ದಪ್ಪ ಸಾಹುಕಾರ ಮತ್ತು ಅಮರೇಶ ಶಾಸ್ತ್ರಿ ಹಾಗೂ ಶ್ರೀಮತಿ ಪದ್ಮಾವತಿ PHCOಹಾಗೂ ಶ್ರೀಮತಿ ತರುಣಬಾನು CHO ಮತ್ತು ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಮಂಜುಳಾ ಹಾಗೂ ಓದುಗರಾರದ ಅಭಿಷೇಕ್, ದೇವರಾಜ, ಹನಮಂತ C R P , ಅಮರೇಶ ಚಿಂಚರಕಿ.ಮತ್ತು ಇನ್ನೂ ಮುಂತಾದವರು ಭಾಗವಹಿಸಿದ್ದರು.. ಮತ್ತು ಇದೆ ಸಂದರ್ಭದಲ್ಲಿ ಗ್ರಾಮ ಆಡಳಿತ ಅಧಿಕಾ–ರಿಗಳಾದ ಸದಾಕಲಿ ಇವರ ಹುಟ್ಟು ಹಬ್ಬವನ್ನು ಆಚರಿಸಲಾಯಿತು ಇವರು ಪರಿಸರದ ಬಗ್ಗೆ ಮಾತನಾಡಿದರು ಮತ್ತು ಇನ್ನೂ ಮುಂತಾದ ಗ್ರಂಥಾಲಯದ ಬಗ್ಗೆ ಮಾತನಾಡಿದರು..

# ಕೆ.ಎಚ್.ಮುನಿಯಪ್ಪನವರಿಗೆ ಪ್ರಬಲ ಖಾತೆ ನೀಡಿ : ಬಸ್ಸು ಮಾದರ

◆ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಸಚಿವರಾದ ಕೆ.ಎಚ್. ಮುನಿಯಪ್ಪ ಅವರು ಸುಮಾರು 45 ರಿಂದ 50 ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿ ಸುಕ್ರಿಯವಾಗಿ ಸೇವೆ ಸಲ್ಲಿಸುತ್ತಿದ್ದು ಸಚಿವರು ನಮ್ಮ ಸಮುದಾಯದ ಹಿರಿಯ ನಾಯಕರಾಗಿದ್ದು ಸಚಿವರಿಗೆ ಅಪಾರ ಅನುಭವ, ಆಡಳಿತ ಸಾಮಥ–್ರ್ಯ ಮತ್ತು ಜನಪ್ರಿಯ ಸೇವೆಯನ್ನು ಪರಿಗಣಿಸದೆ ಕಡಿಮೆ ಪ್ರಾಮುಖ್ಯತೆ ಹೊಂದಿರುವ ಖಾತೆ ನೀಡಿರುವುದು ನಮ್ಮ ಸಮುದಾಯದ ಜನರಲ್ಲಿ ಅಸಮಾಧಾನ ಉಂಟಾಗಿದೆ ಎಂದು ಅಂಬೇಡ್ಕರ್ ಸೇನೆ ಜಿಲ್ಲಾ ಉಪಾಧ್ಯಕ್ಷರಾದ ಬಸ್ಸು ಈ ಕಟ್ಟಿಮನಿ (ಮಾದರ) ಅವರು ಅಸಮಾಧಾನ ವ್ಯಕ್ತಪಡಿಸಿದರು. ಶುಕ್ರವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ಮಾದರ ಮಹಾಸಭಾ ವಿಜಯಪುರ ಘಟಕದ ವತಿಯಿಂದ ಹಮ್ಮಿಕೊಂಡ ಸಭೆಯಲ್ಲಿ ಅವರು ಮಾತನಾಡಿದರು.ಸಮಾಜದ




ಮುಖಂಡರಾದ ಶೇಖಪ್ಪ ಚಬನೂರ ಮಾತನಾಡಿ ರಾಜ್ಯದ ಅಭಿವೃದ್ಧಿ ಹಾಗೂ ಜನ ಸೇವೆಯಲ್ಲಿ ಮಹತ್ತರ ಕೊಡುಗೆ ನೀಡಿರುವ ಸಚಿವರಿಗೆ ಅವರ ಅನುಭವಕ್ಕೆ ತಕ್ಕಂತಹ ಪ್ರಬಲ ಮತ್ತು ಪ್ರಮುಖ ಖಾತೆಯನ್ನು ನೀಡಬೇಕೆಂದು ಆಗ್ರಹಿಸಿದರು. ಬಿಎ□□□ಸ್ ಅಂಬೇಡ್ಕರ್ ಧ್ವನಿ ಚಂದ್ರಕಾಂತ್ ಎಸ್ ಕಾದ್ರೊಳ್ಳಿ ಬಣದ ತಾಲೂಕ ಅಧ್ಯಕ್ಷ ರಮೇಶ ದೊಡಮನಿ ಸಾಸ್ನೂರ ಮಾತನಾಡಿ ಸಚಿವರು ಐದು ದಶಕಗಳಿಂದ ಪಕ್ಷದ ಸಂಘಟನೆ ಬಲಪಡಿಸಲು ಸಮಾಜದ ಅಭಿವೃದ್ಧಿಗೆ ಹಾಗೂ ಜನರ ಸಮಸ್ಯೆಗಳ ಪರಿಹಾರಕ್ಕೆ ನಿರಂತರವಾಗಿ ಶ್ರಮಿಸಿದ್ದಾರೆ ಇಂತಹ ಹಿರಿಯ ಮತ್ತು ಅನುಭವಿ ನಾಯಕರಿಗೆ ಹೆಚ್ಚಿನ ಪ್ರಬಲ ಖಾತೆ ನೀಡುವುದ–ರಿಂದ ಸರಕಾರದ ಆಡಳಿತ ಸುಧಾರಣೆ ಆಗುತ್ತದೆ ಆದ ಕಾರಣ ಪ್ರಬಲ ಖಾತೆ ನೀಡಬೇಕೆಂದು ಹೇಳಿದರು. ಅಂಬೇಡ್ಕರ್ ಸೇನೆ ತಾಲೂಕ ಅಧ್ಯಕ್ಷ ಗೋಪಾಲ್ ಕಟ್ಟಿಮನಿ ಮಾತನಾಡಿ ರಾಜ್ಯ ಸರ್ಕಾರ ಹಾಗೂ ಮಾನ್ಯ ಮುಖ್ಯಮಂತ್ರಿಗಳು ಸಚಿವರ ಅನುಭವ ಮತ್ತು ಹಿರಿಯತೆಯನ್ನು ಪರಿಗಣಿಸಿ ಅವರಿಗೆ ಪ್ರಮುಖ ಮತ್ತು ಪ್ರಭಾವಿ ಖಾತೆ ಮರು ಹಂಚಿಕೆ ಮಾಡಬೇಕೆಂದು ಹೇಳಿ ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿಗಳು ಈ ಬಗ್ಗೆ ಶೀಘ್ರದಲ್ಲಿಯೇ ಸೂಕ್ತ ನಿರ್ಧಾರ ಕೈಗೊಳ್ಳದಿದ್ದರೆ ಮಾದಿಗ ಸಮುದಾಯದ ಮುಖಂಡರು ಮುಂದಿನ ದಿನಗಳಲ್ಲಿ ಕಾಂಗ್ರೆಸ್ ನಿಂದ ಸಾಮೂಹಿಕವಾಗಿ ಹೊರ ನಡೆಯಬೇಕಾಗುತ್ತದೆ ಎಂದು ಎಚ್ಚ–ರಿಕೆ ನೀಡಿದರು. ಸಭೆಯಲ್ಲಿ ಅಂಬೇಡ್ಕರ್ ಸೇನೆ ತಾಲೂಕು ಉಪಾಧ್ಯಕ್ಷ ಮಾದೇವ ಚಟ್ನಳ್ಳಿ.

ಡಿ ಎಸ್ ಎಸ್ (ಆಖಖ)ಅಂಬೇಡ್ಕರ್ ಧ್ವನಿ ಚಂದ್ರಕಾಂತ್ ಎಸ್ ಕಾದ್ರೊಳ್ಳಿ ಬಣ್ಣದ ತಾಲೂಕು ಕಾರ್ಯದರ್ಶಿ ಶಂಕ್ರಪ್ಪ ದೊಡಮನಿ (ಸಾಸನೂರ),ಶರಣಪ್ಪ ಹರನಾಳ,ದೇವಪ್ಪ ತುಂಬಿಗಿ, ಬಸವರಾಜ ಸಾಸನೂರ, ಈರಣ್ಣ ಪತ್ತೆಪುರ್, ಬಾಗಪ್ಪ ಬಿಳೆಭಾವಿ ಹಾಗೂ ಕರ್ನಾಟಕ ಮಾದರ ಮಹಾಸಭಾ ಮುಖಂಡರಿದ್ದರು.

## ಸಾಹಿತ್ಯ ಸಿಂಚನ

### "ಮನೆಯೇ ಆಸ್ಪತ್ರೆ"

ಹೊರಗೆ ಬೋರ್ಡ್ ಮೇಲೆ "ಆಸ್ಪತ್ರೆ" ಅಂತಿದೆ
ಒಳಗೆ ಹೋದ್ರೆ ಅದು "ಭರವಸೆ"ಯ ಮನೆ

ಬಿಳಿ ಗೋಡೆಗೆ ಔಷಧದ ವಾಸನೆ
ಆದ್ರೂ ಇಲ್ಲಿ ಸಿಗೋದು ಹೊಸ ಉಸಿರು

ಕಣ್ಣೀರಲ್ಲಿ ಬರೋರಿಗೆ ನಗು ಕೊಡೋ ಜಾಗ
ನೋವಲ್ಲಿ ನರಳೋರಿಗೆ ನೆಮ್ಮದಿ ಕೊಡೋ ಜಾಗ

ರಾತ್ರಿ ಇಡೀ ಮಲಗದ ದೀಪಗಳು
ಸಾವು-ಬದುಕಿನ ನಡುವೆ ಹೋರಾಡೋ ಸಿಬ್ಬಂದಿಗಳು

ಒಬ್ಬ ಗುಣವಾಗಿ ಹೋದ್ರೆ ನೂರು ಕೈ ಚಪ್ಪಾಳೆ
ಅದೇ ಆಸ್ಪತ್ರೆಯ ಸಂಭ್ರಮ, ಅದೇ ನಿಜವಾದ ಹಬ್ಬ

ಆಸ್ಪತ್ರೆ ಅಂದ್ರೆ ಕೇವಲ ಕಟ್ಟಡ ಅಲ್ಲ
ಮತ್ತೆ ಬದುಕೋಕೆ ಸಿಗೋ ಇನ್ನೊಂದು ಅವಕಾಶ

– ಎಸ್. ದುರಗಪ್ಪ. ಕುಷ್ಟಗಿ.

## ಶೆಬಾಯನ್ ಎಜುಕೇಶನ್ ಟ್ರಸ್ಟ್ ವತಿಯಿಂದ ವಿಶ್ವ ಪರಿಸರ ದಿನ ಆಚರಣೆ

ನೈಜ್ಯ ದೆಸೆ ನ್ಯೂಸ್




ಹಸಿರು ಇದ್ದರೆ ಉಸಿರಾಡಲಿಕ್ಕೆ ಸಾಧ್ಯ, ಹಸಿರೇ ನಮ್ಮ ಉಸಿರು, ಈಗ ಎಲ್ಲಾ ರೀತಿಯಲ್ಲಲ್ಲೂ ಕೂಡ ಮಲೀನ ಕಾಣುತ್ತಿದ್ದೇವೆ, ವಾಯು ಮಾಲಿನ್ಯ, ಪರಿಸರ ಮಾಲಿನ್ಯ, ಹೀಗೆ ಅನೇಕ ಮಾಲೀನ್ಯಗಳ ವಿರುದ್ದ ನಾವೆಲ್ಲರೂ ಒಂದು ಸಂಕಲ್ಪ ಮಾಡಬೇಕಾಗಿದೆ ಎಂದು ಹಿರಿಯ ವಕೀಲರಾದ ಎಸ್.ಎಸ್.ಹಿರೇಮಠ ಹೇಳಿದರು.ಶೆಬಾಯನ್ ಎಜ್ಯುಕೇಷನ್ ಟ್ರಸ್ಟ್ ನ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಸಿಂಧನೂರು ನಗರದ ಮಲ್ಲಾಪುರ ರಸ್ತೆಯಲ್ಲಿರುವ ಆಶ್ರಮ ಕಟ್ಟಿಸುವ ಖಾಲಿ ಜಾಗದ ಸುತ್ತಲೂ ಮತ್ತು ರಸ್ತೆ ಬದಿಯಲ್ಲಿ ಟ್ರಸ್ಟ್ ನ ಮಾಲೀಕರಾದ ಟಿಂಕುದತ್ತಾ, ಮತ್ತು ವಿಷ್ಣುದತ್ತಾ ಅವರ ನೇತೃತ್ವದಲ್ಲಿ ಸುಮಾರು 50 ಕ್ಕೂ ಹೆಚ್ಚು ಸಸಿಗಳನ್ನು ವಿಶ್ವ ಪರಿಸರ ದಿನಾಚರಣೆ ಆಚರಿಸಿ ಸಸಿ ನೆಟ್ಟು ಮಾತನಾಡಿದ ಅವರು, ನಮ್ಮ ಪರಿಸರವನ್ನು ಸ್ವಚ್ಚವಾಗಿ ಇಡುವಂತಹ ಸಾಮಾಜಿಕ ಜವಾಬ್ದಾರಿ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಈ ಶೆಬಾಯನ್ ಎಜುಕೇಶನ್ ಟ್ರಸ್ಟ್ ನ ಮಾಲೀಕರು ಸಾಮಾಜಿಕ ಜವಾಬ್ದಾರಿ ಅರಿತುಗೊಂಡು ಪರಿಸರವನ್ನು ಸಸಿ ನೆಡುವುದರ ಮೂಲಕ ಪರಿಸರ ಜಾಗೃತಿಯನ್ನು ಮೂಡಿಸಿದ್ದು ಬಹಳ ವಿಶೇಷವಾಗಿದೆ ಎಂದರು. ಈ ವೇಳೆ: ರಾಮಕೃಷ್ಣ ಆಶ್ರಮದ ಪರಮಾನಂದ ಸ್ವಾಮಿಗಳು, ಟಿಂಕುದತ್ತಾ, ವಿಷ್ಣುದತ್ತಾ, ನೇತ್ರತಜ್ಞ ಚನ್ನನಗೌಡ, ಸಹನಾ ಹಿರೇಮಠ, ಪಿಪಿಲಾ, ಭೀತಿಕ, ಆನಂದ, ಬಿಜೆಪಿ ರಾಜ್ಯ ಕಾರ್ಯಕಾರಿ ಸದಸ್ಯರು ಹಾಗೂ ಅಲ್ಪಸಂಖ್ಯಾತ ಮೋರ್ಚದ ಸಿರಾಜ್, ಪ್ರಭು ದೇವರಗುಡಿ, ಹಾಗೂ ಸುದೀಪ್ ಸೇರಿದಂತೆ ಅನೇಕರು ಭಾಗವಹಿಸಿ ಸಸಿ ನೆಟ್ಟು ವಿಶ್ವ ಪರಿಸರ ದಿನಾಚರಣೆ ಆಚರಿಸಿದರು.ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಅನಾರೋಗ್ಯ ಪೀಡಿತ ಸಂಜಯ ಕುಮಾರನಿಗೆ ಸಂಜೀವಿನಿಯಾದ ಕಾರುಣ್ಯ ಆಶ್ರಮ

ನೈಜ್ಯ ದೆಸೆ ನ್ಯೂಸ್

ಸಿಂಧನೂರು – ರಾಯಚೂರು ತಾಲೂಕಿನ ಸಗಮಕುಂಟಾ ಗ್ರಾಮದಲ್ಲಿ ಸುಮಾರು ವರ್ಷಗಳಿಂದ ವಾಸವಾಗಿದ್ದ ಅನಾರೋಗ್ಯ ಪೀಡಿತ ಸಂಜಯ ಕುಮಾರ ತಂ. ಗುಂಡಪ್ಪ ವಿಜಯಪುರ ವಯಸ್ಸು-52 ಈತನನ್ನು ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯ ಪಿ.ಎಸ್.ಐ. ಗಳಾದ ಪ್ರಕಾಶ ಡಂಬಳ ಅವರ ಮಾಹಿತಿಯೊಂದಿಗೆ ಸಿಂಧನೂರು ನಗರದ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಆಶ್ರಯ ಕಲ್ಪಿಸಲಾಯಿತು.

ಈತನಿಗೆ ಒಬ್ಬ ಅಂಬಿಕಾ ವಯಸ್ಸು-18 ಮಗಳಿದ್ದು ಹೈದ್ರಾಬಾದ್ ನಲ್ಲಿ ದುಡಿಮೆ ಮಾಡುತ್ತಾ ತನ್ನ ಶಿಕ್ಷಣವನ್ನು ಪಡೆಯುತ್ತಿದ್ದಾಳೆ. ಈತನಿಗೆ ಹೆಂಡತಿ ಹಾಗೂ ಸಂಬಂಧಿಕರು ಯಾರು ಇರುವುದಿಲ್ಲ ಈತನ ಬಗ್ಗೆ ಸಗಮ



ಕುಂಟಾ ಗ್ರಾಮದ ಈರಣ್ಣ ಹಾಗೂ ಗ್ರಾಮಸ್ಥರು ಈತನ ಪರಿಸ್ಥಿತಿಯನ್ನು ಪಿ.ಎಸ್.ಐ.ಗಳಿಗೆ ಹಾಗೂ ಕಾರುಣ್ಯ ಆಶ್ರಮದ ಗಮನಕ್ಕೆ ತಂದಿದ್ದರು. ಈ ಸಂದರ್ಭದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ಬರೀ ಆರೋಗ್ಯವಂತರನ್ನು ಅನಾಥರನ್ನು ಕಾಪಾಡುವುದಷ್ಟೇ ನಮ್ಮ ಕೆಲಸವಲ್ಲ ಇಂತಹ ಅನಾರೋಗ್ಯವಂತ ಸ್ಥಿತಿಯಲ್ಲಿರುವ ಈತನ ಮಗಳು ಕೂಡ ಅನಾರೋಗ್ಯದಿಂದ ಬಳಲುತ್ತಿದ್ದು ಅನಾರೋಗ್ಯದ ಜೊತೆಯೂ ಕೂಡ ದುಡಿಮೆಯೊಂದಿಗೆ ಶಿಕ್ಷಣ ಪಡೆಯುತ್ತಿರುವುದನ್ನು ನಮ್ಮ ಗಮನಕ್ಕೆ ತಂದಿರುವ ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್ಐ ಗಳಾದ ಪ್ರಕಾಶ್ ಡಂಬಳ ಅವರಿಗೆ ಕರುಣೆಯ ಕಾರುಣ್ಯ ಕುಟುಂಬದ ವತಿಯಿಂದ ಧನ್ಯವಾದಗಳು.

ಇಂತಹ ನಿರಂತರ ಸೇವಾ ಕಾರ್ಯಗಳು ದಾನಿಗಳೇ ಬಹುದೊಡ್ಡ ಶಕ್ತಿಯಾಗಿ ನಿಂತಿದ್ದಾರೆ. ನಮ್ಮ ಕಾರುಣ್ಯ ಕುಟುಂಬದ ಮೂಲ ಉದ್ದೇಶ ನೆಲೆ ಇಲ್ಲದ ಜೀವಿಗಳಿಗೆ ತಮಗರಿವಿಲ್ಲದ ಬುದ್ಧಿಮಾಂದ್ಯರಿಗೆ ಮತ್ತು ನೊಂದ ಜೀವಿಗಳಿಗೆ ಊಟ ವಸತಿ ಅರೋಗ್ಯ ಆಶ್ರಯವಲ್ಲದೆ ಪ್ರೀತಿಯ ಸಂಬಂಧದ ಬದುಕು ಕಟ್ಟಿಕೊಡುವುದು. ಈಗಾಗಲೇ ಆಶ್ರಮದಲ್ಲಿ ದಿನೇ ದಿನೇ ಆಶ್ರಯದಾತುರುಗಳ ಸಂಖ್ಯೆ ಹೆಚ್ಚಾಗುತ್ತಿದ್ದು ಆಶ್ರಮದ ನಿರ್ವಹಣೆ ಬಹಳ ಕಷ್ಟದ ಸ್ಥಿತಿಯಲ್ಲಿದೆ ಆದುದರಿಂದ ದಯಾಳುಗಳಾದ ಕರುನಾಡಿನ ಕರುಣಾಮಯಿಗಳು ತಮ್ಮ ತಮ್ಮ ಕೈಯಿಂದದಾಷ್ಟು ದಾನಿಗಳಲ್ಲಿ ಸಹಾಯ ಸಹಕಾರವನ್ನು ಬೇಡಿಕೊಳ್ಳುತ್ತಿದ್ದೇವೆ ಎಂದು ಮಾತನಾಡಿದರು. ಸಹಾಯ ಮಾಡಲಿಚ್ಚಿಸುವವರು ಫೋನ್ & ಗೂಗಲ್ ಪೇ ನಂಬರ್ -9731983111 ಅಥವಾ 9110858985 ಮಾಡಬಹುದು ಸೂಕ್ತ ರಶೀದಿಯನ್ನು ತಮಗೆ ತಲುಪಿಸಲಾಗುವುದು ಈ ಸಮಯದಲ್ಲಿ ಈರಣ್ಣ ಸಗಮಕುಂಟಾ. ಸುಜಾತ ಹಿರೇಮಠ ಸದಸ್ಯರು ಕಾರುಣ್ಯ ಆಶ್ರಮ.ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಅನೇಕರು ಉಪಸ್ಥಿತರಿದ್ದರು

## ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ: ಕಂಚಿ ಮಾಯಣ್ಣ ಗೌತಮ್

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಕಲ್ಮಠದ ಪೂಜ್ಯ ಶ್ರೀ ವಿರೂಪಾಕ್ಷ ಶಿವಾಚಾರ್ಯ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಆವರಣದಲ್ಲಿ ಅರಣ್ಯ ಇಲಾಖೆ, ಪ್ರಾದೇಶಿಕ ಅರಣ್ಯ ವಲಯ ಮಾನ್ವಿ, ತಾಲೂಕು ಕಾನೂನು ಸೇವಾ ಸಮಿತಿ,** ತಾಲೂಕು ನ್ಯಾಯವಾದಿಗಳ ಸಂಘ ಹಾಗೂ ಕೆ.ಪಿ.ಎಸ್.ವಿ.ಎಸ್. ಆಯುರ್ವೇದಿಕ್ ಕಾಲೇಜಿನ ದ್ರವ್ಯಗುಣ ವಿಭಾಗದ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶ ಕಂಚಿ ಮಾಯಣ್ಣ ಗೌತಮ್ ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ಪರಿಸರ ಮತ್ತು ಪ್ರಕೃತಿಯ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದರ ಜೊತೆಗೆ ಮುಂದಿನ ಪೀಳಿಗೆಗಾಗಿ ಅವುಗಳನ್ನು ಸಂರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಹೇಳಿದರು. ಗಿಡಗಳನ್ನು ನೆಡುವುದಷ್ಟೇ




ಅಲ್ಲ, ಅವುಗಳನ್ನು ಪೋಷಿಸಿ ಬೆಳೆಸುವುದೂ ಅಷ್ಟೇ ಮುಖ್ಯವಾಗಿದ್ದು, ಜಾಗತಿಕ ತಾಪಮಾನ ನಿಯಂತ್ರಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಮರಗಳನ್ನು ಬೆಳೆಸುವ ಅಗತ್ಯವಿದೆ ಎಂದು ತಿಳಿಸಿದರು.

ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿ ಪುರುಷೋತ್ತಮ ರಾವಜೀ ಮಾತನಾಡಿ, ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮಾನ್ವಿ ಪಟ್ಟಣದಲ್ಲಿ ಒಂದು ಸಾವಿರ ಗಿಡಗಳನ್ನು ನೆಟ್ಟು ಬೆಳೆಸುವ ಗುರಿಯನ್ನು ಇಲಾಖೆ ಹೊಂದಿದೆ ಎಂದು ತಿಳಿಸಿದರು. ಮರಗಳನ್ನು ನಾವು ಕಾಪಾಡಿದರೆ ಅವು ನಮ್ಮನ್ನು ಕಾಪಾಡುತ್ತವೆ. ಕುಟುಂಬಗಳಲ್ಲಿ ನಡೆಯುವ ಹುಟ್ಟುಹಬ್ಬ, ವಿವಾಹ ಸೇರಿದಂತೆ ಶುಭ ಸಮಾರಂಭಗಳ ಸಂದರ್ಭದಲ್ಲಿ ಗಿಡ ನೆಡುವ ಅಭ್ಯಾಸ ಬೆಳೆಸಿಕೊಂಡರೆ ಪರಿಸರ ಸಂರಕ್ಷಣೆಗೆ ಹೆಚ್ಚಿನ ಉತ್ತೇಜನ ದೊರೆಯಲಿದೆ ಎಂದರು. ಇದೇ ಸಂದರ್ಭದಲ್ಲಿ ಕಾಲೇಜು ಆವರಣದಲ್ಲಿ ನೂರಾರು ವಿವಿಧ ತಳಿಯ ಸಸಿಗಳನ್ನು ನೆಡಲಾಯಿತು.

ಕಾರ್ಯಕ್ರಮದಲ್ಲಿ ಕಲ್ಮಠದ ವಿರೂಪಾಕ್ಷ ಶಿವಾಚಾರ್ಯ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಸಿವಿಲ್ ನ್ಯಾಯಾಧೀಶ ಆನಂದ ಹೆಚ್. ಕೊಣ್ಣೂರು, ಸಹಾಯಕ ಸರ್ಕಾರಿ ಅಭಿಯೋಜಕಿ ಅರ್ಚನಾ ಯಾದವ್, ಪ್ರಾಚಾರ್ಯ ಡಾ. ಜೀವನೇಶ್ವರಯ್ಯ, ತಾಲೂಕು ವಕೀಲರ ಸಂಘದ ಅಧ್ಯಕ್ಷ ರವಿಕುಮಾರ ಪಾಟೀಲ್, ಡಾ. ವಸಂತ, ವಲಯ ಅರಣ್ಯಾಧಿಕಾರಿ ಉಮಕಾಂತ, ಪರಿಸರ ಪ್ರೇಮಿ ಸಲಾವುದ್ದೀನ್, ನ್ಯಾಯವಾದಿಗಳಾದ ಯಲ್ಲಪ್ಪ ಬಾದರದಿನ್ನಿ, ಚನ್ನಬಸವನಾಯಕ, ಶಶಿಕಾಂತಯ್ಯಸ್ವಾಮಿ, ವಕೀಲರ ಸಂಘದ ಪದಾಧಿಕಾರಿಗಳು, ಕಾಲೇಜಿನ ಉಪನ್ಯಾಸಕರು ಹಾಗೂ ವೈದ್ಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಕಂಪ್ಲಿ ಶ್ರೀ ಬಸವೇಶ್ವರ, ನೀಲಮ್ಮನವರ ಜೋಡಿ ರಥದ ಗೊಂಬೆ, ಬಾಗಿಲ್ವಾಡಗಳ ದುರಸ್ತಿ ಕಾರ್ಯ ಆರಂಭ



ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಪೇಟೆ ಬಸವೇಶ್ವರ ನೀಲಮ್ಮನವರ ದೇವಸ್ಥಾನ ಕಂಪ್ಲಿ ಪಟ್ಟಣದ ಪ್ರಮುಖ ಆರಾಧ್ಯ ದೈವವಾಗಿದ್ದು, ಇಲ್ಲಿನ **ಜೋಡಿ ರಥೋತ್ಸವ ಅತ್ಯಂತ ಪ್ರಸಿದ್ಧಿಯಾಗಿದೆ.**

ಪಟ್ಟಣದ ಆರಾಧ್ಯ ದೈವ ಪೇಟೆ ಬಸವೇಶ್ವರ ನೀಲಮ್ಮನವರ ಜೋಡಿ ರಥದ ಗೊಂಬೆ, ಬಾಗಿಲ್ವಾಡಗಳ ದುರಸ್ತಿ ಕಾರ್ಯದಲ್ಲಿ ಸ್ಥಳೀಯ ಪರಶುರಾಮಪ್ಪ ಚಿತ್ರಗಾರ ವಿಜಯನಗರ ಜನಪದ ಕರಕುಶಲ ಕಲಾವಿದರ ಕುಟುಂಬದ ಸದಸ್ಯರು ತೊಡಗಿಕೊಂಡಿದ್ದಾರೆ. ಎರಡು ರಥಗಳ ಬಾಗಿಲ್ವಾಡ, (ರಥದ ಪ್ರವೇಶ ದ್ವಾರದ ಚೌಕಟ್ಟುಗಳು) ಗೊಂಬೆ, ಸಿಂಹ, ಪಟ, ಡುಬುರಿಗಳ ಜೊತೆಗೆ ನಂದಿ, ರಾವಣ, ಇಬ್ಬರು ದ್ವಾರಪಾಲಕರ ದುರಸ್ತಿ ಭರದಿಂದ ಸಾಗಿದೆ. ಕಟ್ಟಿಗೆ ಪುಡಿ, ಹುಣಸೆಬೀಜದ ಅಂಬಲಿ(ಸರಿ), ಗೋಣಿ ತಟ್ಟಿನ ನಾರು ಸೇರಿ ಅಂಟು ತಯಾರಿಸಿ ದುರಸ್ತಿ ಮಾಡಲಾಗುತ್ತಿದೆ.

ನಂತರ, ಗೊಂಬೆಗಳ ಆಕಾರ ತಿದ್ದಿಕೊಂಡು ಬಟ್ಟೆ ಲೇಪಿಸಿ ಬಳಿಕ ವಿಭೂತಿ, ಹುಣಸೆಬೀಜದ ಅಂಬಲಿ(ಸರಿ)ಯನ್ನು ಮೂರು ಸಲಲೇಪನ ಮಾಡಿ ಶುದ್ಧಗೊಳಿಸಲಾಗುವುದು. ತದನಂತರ ಬಣ್ಣಲೇಪನಗೊಳಿಸಲಾಗುತ್ತದೆ. ಈ ಎಲ್ಲ ಕಾರ್ಯಗಳು ನಾಲ್ಕೈದು ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಪರಶುರಾಮಪ್ಪ ಚಿತ್ರಗಾರ ವಿಜಯನಗರ ಜನಪದ ಕರಕುಶಲ ಕಲೆಗಳ ಟ್ರಸ್ಟ್ ಅಧ್ಯಕ್ಷೆ ಸುಮಿತ್ರಮ್ಮಚಿತ್ರಗಾರ ವಿವರಿಸಿದರು. ಗೊಂಬೆಗಳ ದುರಸ್ತಿಯಲ್ಲಿ ಪರಶುರಾಮಪ್ಪ ಚಿತ್ರಗಾರ ಕುಟುಂಬದ ರಾಮಕೃಷ್ಣ, ಲಕ್ಷ್ಮಿ, ಸಂಗೀತಾ, ಸ್ವಪ್ನಾ, ಶೃತಿ, ರಾಮಚಂದ್ರ, ರವಿ, ರಾಜಾರಾಮ್, ಪ್ರಕಾಶ್, ಸುಮಂತ್ ಭಾಗವಹಿಸಿದ್ದರು.

## "ಸ್ಮಶಾನಕ್ಕೆ ಭೂಮಿ ನೀಡಲು ಆಗ್ರಹ"

ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲೂಕಿನ ಹಂಚಿನಾಳ(ಯು) ಕ್ಯಾಂಪಿನ ನಿವಾಸಿಗಳಿಗೆ ಸ್ಮಶಾನಕ್ಕೆ ಭೂಮಿ ಮಂಜೂರು ಮಾಡುವಂತೆ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ತಹಸೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು.

ಗುಡದೂರು ಹೋಬಳಿಯ ಗುಡಗಲದಿನ್ನಿ ಸೀಮೆಯ ಸರ್ವೆ ನಂ.16ರಲ್ಲಿ 04 ಎಕರೆ ಸರಕಾರಿ ಜಮೀನು ಇದ್ದು ಇದರಲ್ಲಿ 01 ಎಕರೆ ಜಮೀನನ್ನು ಹಂಚಿನಾಳ(ಯು) ಕ್ಯಾಂಪ್ ನಿವಾಸಿಗಳಿಗೆ ಸ್ಮಶಾನಕ್ಕೆ ಮೀಸಲಿಡಬೇಕೆಂದು ಮನವಿ ಮಾಡಿಕೊಂಡರು.



ಸುಮಾರು ವರ್ಷಗಳಿಂದ ಹಂಚಿನಾಳ ಕ್ಯಾಂಪಿನಲ್ಲಿ ವಾಸಮಾಡುತ್ತಿದ್ದು, ನಮ್ಮ ಕ್ಯಾಂಪಿಗೆ ಸ್ಮಶಾನ ಭೂಮಿ ಇಲ್ಲದೇ ಇರುವದರಿಂದ ನಮ್ಮ ಕ್ಯಾಂಪಿನ ಸಾರ್ವಜನಿಕರ ಕುಟುಂಬದ ಯಾರೇ ಸದಸ್ಯರು ಮೃತಪಟ್ಟಲ್ಲಿ ಶವ ಸಂಸ್ಕಾರಕ್ಕಾಗಿ ಪಕ್ಕದ ಊರಿನ ಸ್ಮಶಾನದಲ್ಲಿ ಶವ ಸಂಸ್ಕಾರ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಬಗ್ಗೆ ಸುಮಾರು ವರ್ಷಗಳಿಂದ ತಹಶೀಲ್ದಾರ್ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದ್ದೇವೆ. ತಹಶೀಲ್ದಾರರ ಆದೇಶದ ಮೇರೆಗೆ ಕಂದಾಯ ನಿರೀಕ್ಷಕರು, ಗುಡದೂರು ಗ್ರಾಮಲೇಕ್ಕಿಗರು, ಭೂ ಮಾಪನ ಅಧಿಕಾರಿಗಳು ಗುಡದೂರು ಹೋಬಳಿಯ, ಗುಡಗಲದಿನ್ನಿ ಸೀಮೆಯ ಸರ್ವೆ ನಂ.16 ರಲ್ಲಿ 01 ಎಕರೆ ಭೂಮಿಯನ್ನು ಹಂಚಿನಾಳ ಕ್ಯಾಂಪ್ (ಯು) ಸಾರ್ವಜನಿಕರ ಸ್ಮಶಾನಕ್ಕಾಗಿ ಭೂಮಿಯನ್ನು ಗುರುತಿಸಿ ಹದ್ದುಬಸ್ತು ಮಾಡಿ ಎಲ್ಲಾ ದಾಖಲೆಗಳನ್ನು ಲಿಂಗಸುಗೂರಿನ ಸಹಾಯಕ ಆಯುಕ್ತರಿಗೆ ಮುಂದಿನ ಆದೇಶಕ್ಕಾಗಿ ವರದಿಯಲ್ಲಿ ಸಲ್ಲಿಸಿರುತ್ತಾರೆ. ಆದ್ದರಿಂದ ಕೂಡಲೇ ಜಮೀನನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಮಲ್ಲಿಕ್ ಮುರಾರಿ, ಮರಿಸ್ವಾಮಿ ಹಸಮಕಲ್, ವೀರಭದ್ರಗೌಡ, ಈರಪ್ಪ, ಸುಭಾಸ ಕಡಬೂರು, ರಾಜು, ಬವಸರಾಜ ಸೇರಿದಂತೆ ಕ್ಯಾಂಪಿನ ನಿವಾಸಿಗಳಿದ್ದರು.

# ಸರ್ವೋದಯ CBSC ಶಾಲೆಗೆ ಚಾಲನೆ ನೀಡಿದ ನಾಗರತ್ನ ಪಾಟೀಲ್

## 2026-27ನೇ ಸಾಲಿಗೆ ಅನುಮೋದನೆ ಪಡೆದ ಏಕೈಕ ಶಾಲೆ ಎಂಬ ಹೆಗ್ಗಳಿಕೆ: ರಾಜ ಸುಭಾಷ್‌ಚಂದ್ರ ನಾಯಕ ಮಾನ್ವಿ

ನೈಜ್ಯ ದೆಸೆ ನ್ಯೂಸ್

**ಶಿಕ್ಷಣ ಕ್ಷೇತ್ರದಲ್ಲಿ ಹೊಸ ಅಧ್ಯಾಯ ಆರಂಭಿಸುವ ಮೂಲಕ ಮಾನ್ವಿ ಪಟ್ಟಣದ ಸರ್ವೋದಯ ಸಿಬಿಎಸ್‌ಇ ಶಾಲೆಯ 2026-27ನೇ ಶೈಕ್ಷಣಿಕ ವರ್ಷದ ಶಾಲಾ ಉದ್ಘಾಟನಾ ಸಮಾರಂಭವು ಬುಧವಾರ ಅದ್ದೂರಿಯಾಗಿ ನಡೆಯಿತು. ನಾಗಲಾಂಬಿಕೆ ಪಟ್ಟಣ ಸಹಕಾರ ಬ್ಯಾಂಕ್ ಅಧ್ಯಕ್ಷೆ ಶ್ರೀಮತಿ ನಾಗರತ್ನ ಪಾಟೀಲ್ ಅವರು ಶಾಲೆಯನ್ನು ಉದ್ಘಾಟಿಸಿ ನೂತನ ಶೈಕ್ಷಣಿಕ ವರ್ಷದ ಆರಂಭಕ್ಕೆ ಚಾಲನೆ ನೀಡಿದರು.**

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಸರ್ವೋದಯ ಶಿಕ್ಷಣ ಸಂಸ್ಥೆ ಕೈಗೊಂಡಿರುವ ಪ್ರಯತ್ನಗಳು ಶ್ಲಾಘನೀಯವಾಗಿದ್ದು, ಇಂತಹ ಶಿಕ್ಷಣ ಸಂಸ್ಥೆಗಳು ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತವೆ ಎಂದು ಹೇಳಿದರು. ಕಾರ್ಯಕ್ರಮದ ಗೌರವ ಅತಿಥಿಯಾಗಿ ಭಾಗವಹಿಸಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷ ರಾಜ ಸುಭಾಷ್‌ಚಂದ್ರ ನಾಯಕ ಮಾತನಾಡಿ, "ಮಾನ್ವಿ ಪಟ್ಟಣದಲ್ಲಿ 2026-27ನೇ ಸಾಲಿನಲ್ಲಿ ಸಿಬಿಎಸ್‌ಇ ಮಾನ್ಯತೆ ಪಡೆದ ಏಕೈಕ ಶಾಲೆ ಎಂಬ ಹೆಗ್ಗಳಿಕೆಗೆ




ಸರ್ವೋದಯ ಸಿಬಿಎಸ್‌ಇ ಶಾಲೆ ಪಾತ್ರವಾಗಿದೆ. ಗ್ರಾಮೀಣ ವಿದ್ಯಾರ್ಥಿಗಳಿಗೂ ರಾಷ್ಟ್ರೀಯ ಮಟ್ಟದ ಶಿಕ್ಷಣ ಸಿಗಬೇಕು ಎಂಬ ಆಶಯದಿಂದ ಸಂಸ್ಥೆ ಕಾರ್ಯನಿರ್ವಹಿಸುತ್ತಿರುವುದು ಸಂತಸದ ವಿಷಯವಾಗಿದೆ" ಎಂದು ಹೇಳಿದರು.

ಮತ್ತೊರ್ವ ಗೌರವ ಅತಿಥಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ಮಾಜಿ ಅಧ್ಯಕ್ಷ ಸರ್ಫುದ್ದೀನ್ ಮಾತನಾಡಿ, "ಮಾ ಫ್ರೆಂಡ್ಸ್ ಸಂಸ್ಥೆಯು ಸಮಾಜಕ್ಕೆ ಉತ್ತಮ ಶಿಕ್ಷಣ ಎಂಬ ಅಮೂಲ್ಯ ಕೊಡುಗೆಯನ್ನು ನೀಡುತ್ತಿದೆ. ಕೇವಲ ಶಾಲೆ ನಿರ್ಮಿಸುವುದಲ್ಲ, ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಕಾರ್ಯವನ್ನು ಮಾಡುತ್ತಿದೆ. ಇಂತಹ ಶಿಕ್ಷಣ ಸಂಸ್ಥೆಗಳು ಸಮಾಜದ ಪ್ರಗತಿಗೆ ಬಲವಾದ ಅಡಿಪಾಯವಾಗಿವೆ" ಎಂದು ಅಭಿಪ್ರಾಯಪಟ್ಟರು.

ಸಂಸ್ಥೆಯ ಸಂಸ್ಥಾಪಕರಾದ ಒಂ೦೦ ಫ್ರೆಂಡ್ಸ್ ಮಾತನಾಡಿ, "ಮಾನ್ವಿ ನಗರದಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ನಾವು ಸದಾ ಬದ್ಧರಾಗಿದ್ದೇವೆ. ಆಧುನಿಕ ಸೌಲಭ್ಯಗಳು, ಅನುಭವಿ ಶಿಕ್ಷಕರ ಬಳಗ ಹಾಗೂ ಮೌಲ್ಯಾಧಾರಿತ ಶಿಕ್ಷಣದ ಮೂಲಕ ವಿದ್ಯಾರ್ಥಿಗಳನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸುವಂತೆ ರೂಪಿಸುವುದು ನಮ್ಮ ಗುರಿಯಾಗಿದೆ". ಶಿಕ್ಷಣದ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೇ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಆದ್ಯತೆ ನೀಡಲಾಗುತ್ತಿದೆ ಎಂದರು. ಶಾಲೆಯ ಪ್ರಾಚಾರ್ಯರಾದ ಜೋಸೆಫ್ ಎಸ್. ಬೈಲಾ ಮಾತನಾಡಿ, "ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ನಾವು ಸಂಪೂರ್ಣ ಬದ್ಧರಾಗಿದ್ದೇವೆ. ಶೈಕ್ಷಣಿಕ ಸಾಧನೆಯ ಜೊತೆಗೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ, ನೈತಿಕ ಮೌಲ್ಯಗಳು ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವತ್ತ ವಿಶೇಷ ಗಮನ ಹರಿಸಲಾಗುತ್ತದೆ" ಎಂದು ಹೇಳಿದರು.

ಸಿಬಿಎಸ್‌ಇ, ನವದೆಹಲಿ ಮಾನ್ಯತೆ (ಅಫಿಲಿಯೇಷನ್ ಸಂಖ್ಯೆ 831728) ಪಡೆದಿರುವ ಸರ್ವೋದಯ ಸಿಬಿಎಸ್‌ಇ ಶಾಲೆಯು ಆಧುನಿಕ ತರಗತಿ ಕೊಠಡಿಗಳು, ಸುಸಜ್ಜಿತ ಪ್ರಯೋಗಾಲಯಗಳು, ಡಿಜಿಟಲ್ ಶಿಕ್ಷಣ ವ್ಯವಸ್ಥೆ, ಕ್ರೀಡಾ ಸೌಲಭ್ಯಗಳು ಹಾಗೂ ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ವಿಧಾನಗಳ ಮೂಲಕ ಈಗಾಗಲೇ ಪೋಷಕರ ಮೆಚ್ಚುಗೆ ಗಳಿಸಿದೆ. ಕಾರ್ಯಕ್ರಮದಲ್ಲಿ ಆಡಳಿತ ಅಧಿಕಾರಿ ದತ್ತಾತ್ರೇಯ ಮೇಟಿ, ಸರ್ವೋದಯ ಪ್ಯಾರಮೆಡಿಕಲ್ ಮತ್ತು ನರ್ಸಿಂಗ್ ಪ್ರಾಚಾರ್ಯರಾದ ಶಿವಕುಮಾರ, ಸರ್ವೋದಯ ಫಾರ್ಮಸಿ ಕಾಲೇಜಿನ ಪ್ರಾಚಾರ್ಯರಾದ ನವೀನ್ ಕುಮಾರ್, ಶಿಕ್ಷಕರು, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಣ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಶಾಲೆಯ ಹೊಸ ಶೈಕ್ಷಣಿಕ ವರ್ಷದ ಆರಂಭವು ಹಬ್ಬದ ವಾತಾವರಣದಲ್ಲಿ ನಡೆಯಿತು. ಮಾನ್ವಿಯ ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಭರವಸೆಯಾಗಿ ಹೊರಹೊಮ್ಮಿರುವ ಸರ್ವೋದಯ ಸಿಬಿಎಸ್‌ಇ ಶಾಲೆಯು ರಾಷ್ಟ್ರೀಯ ಮಟ್ಟದ ಶಿಕ್ಷಣವನ್ನು ಗ್ರಾಮೀಣ ವಿದ್ಯಾರ್ಥಿಗಳಿಗೆ ತಲುಪಿಸುವ ಮೂಲಕ ಶಿಕ್ಷಣ ಕ್ರಾಂತಿಗೆ ನಾಂದಿ ಹಾಡಿದೆ ಎಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರು ಅಭಿಪ್ರಾಯಪಟ್ಟರು.

## ನೇಮಕಾತಿ ಪ್ರಕಟಣೆ

### KEA ನೇಮಕಾತಿ 2026 ? 945 ಕೃಷಿ ಅಧಿಕಾರಿ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 31, 2026

KEA ನೇಮಕಾತಿ 2026: 945 ಕೃಷಿ ಅಧಿಕಾರಿ (AO), ಸಹಾಯಕ ಕೃಷಿ ಅಧಿಕಾರಿ (AAO) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ಏಪ್ರಿಲ್ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಕರ್ನಾಟಕ ಕೃಷಿ ಇಲಾಖೆ, ಕೃಷಿ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ (30 ಮೇ 2026). ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 20–ಜೂನ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 30–05–2026

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20–ಜೂನ್–2026

ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 22–ಜೂನ್–2026

ಅಧಿಕೃತ ವೆಬ್‌ಸೈಟ್: cetonline.karnataka.gov.in

## ಜಾಲಿಹಾಳ ಸರ್ಕಾರಿ ಕಾಲೇಜಿನಲ್ಲಿ ಪರಿಸರ ದಿನಾಚರಣೆ.

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ಜಾಲಿಹಾಳ ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಕಾಲೇಜಿನ ಮೈದಾನದಲ್ಲಿ ಸಸಿಗಳನ್ನು ನೆಡಲಾಯಿತು.



ಮರಗಳು ಪ್ರಾಣಿಪಕ್ಷಿಗಳ ಮತ್ತು ಮಾನವ ಸಂಕುಲಗಳಿಗೆ ಉಸಿರನ್ನು ನೀಡುತ್ತವೆ. ಉಸಿರು ನಿರಂತರವಾಗಿ ಇರಬೇಕೆಂದರೆ ಹಸಿರು ಬಹಳ ಮುಖ್ಯವಾಗುತ್ತದೆ. ಆ ನಿಟ್ಟಿನಲ್ಲಿ ವಿದ್ಯಾರ್ಥಿ ಯುವಜನರೆಲ್ಲರೂ ಮನೆಗೊಂದು ಮರಗಳನ್ನು ಬೆಳೆಸುವ ಮೂಲಕ ಸಸ್ಯ ಸಂಪತ್ತನ್ನು ಉಳಿಸುವುದರಿಂದ ಜೀವ ಸಂಕುಲಗಳಿಗೆ ಬದುಕುವ ನೆಲೆಯನ್ನು ಕಂಡುಕೊಂಡಂತಾಗುತ್ತದೆ ಎಂದು ಕಾಲೇಜಿನ ಪ್ರಾಚಾರ್ಯರಾದ ಮುರಡಯ್ಯಸ್ವಾಮಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ಹಿರಿಯ ಉಪನ್ಯಾಸಕರಾದ ವಿಜಯಕುಮಾರ, ಡಾ.ಹುಸೇನಪ್ಪ ಅಮರಾಪುರ, ವೆಂಕಟೇಶ ಬುಕ್ಕನಹಟ್ಟಿ ಗೊರೇಬಾಳ, ಸರಕಾರಿ ಪ್ರೌಢಶಾಲೆಯ ಶಾಲಾ ಸುಧಾರಣಾ ಅಧ್ಯಕ್ಷ ಶಿವಕುಮಾರ, ಸುನೀತಾ ಕುರಿ, ಬಸವರಾಜ ಜಾಲಿಹಾಳ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರಿದ್ದರು.

## ವಿಶ್ವ ಪರಿಸರ ದಿನ ಆಚರಣೆ

ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಪಟ್ಟಣದ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಇಂದು ವಿಶ್ವ ಪರಿಸರ ದಿನಾಚರಣೆಯನ್ನು ಶುಕ್ರವಾರ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷರಾದ ಸಿದ್ದನಗೌಡ ಮಂಗಳೂರ ಅವರು ಶಾಲಾ ಆವರಣದಲ್ಲಿ ಸಸಿಯನ್ನು ನಡೆಸಿ ವಿಶ್ವ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಗುರುಗಳಾದ ಸಂತೋಷ ಪವಾರ, ಮುಖ್ಯಅತಿಥಿ ಸಂಗನಗೌಡ ಅಸ್ಕಿ. ಮತ್ತು ಸರ್ವ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸರ್ವೋದಯ ಸಿಬಿಎಸ್‌ಸಿ ಶಾಲೆಯಿಂದ ವಿಶ್ವ ಪರಿಸರ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮಾನ್ವಿಯ ಸರ್ವೋದಯ ಸಿಬಿಎಸ್‌ಸಿ ಶಾಲೆ ವತಿಯಿಂದ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಮಹತ್ವವನ್ನು ತಿಳಿಸುವ ಉದ್ದೇಶದಿಂದ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಅಂಗವಾಗಿ ಶಾಲೆಯ ವಿದ್ಯಾರ್ಥಿಗಳು, ಪ್ರಾಚಾರ್ಯರು ಹಾಗೂ ಶಿಕ್ಷಕರು ಮಾನ್ವಿ ಪೊಲೀಸ್ ಠಾಣೆ ಮತ್ತು ತಹಸೀಲ್ದಾರ್ ಕಚೇರಿಗೆ ಭೇಟಿ ನೀಡಿ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಿದರು. ಈ ಸಂದರ್ಭದಲ್ಲಿ ಪರಿಸರ ಸಂರಕ್ಷಣೆ, ಮರಗಳ ಮಹತ್ವ ಹಾಗೂ ಹಸಿರು ವಾತಾವರಣ ನಿರ್ಮಾಣದ ಕುರಿತು ಜಾಗೃತಿ ಮೂಡಿಸಲಾಯಿತು. ಮಾನ್ವಿ ಪೊಲೀಸ್ ಠಾಣೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಿಐ



ಸೋಮಶೇಖರ್ ಎಸ್ ಕೆಂಚರೆಡ್ಡಿ ಅವರು ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಅಗತ್ಯತೆ ಕುರಿತು ತಿಳಿಸಿ, ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡ ನೆಟ್ಟು ಅದರ ಪೋಷಣೆ ಮಾಡುವ ಮೂಲಕ ಪರಿಸರ ಉಳಿವಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಇದೇ ವೇಳೆ ತಹಸೀಲ್ದಾರ್ ಕಚೇ–ರಿಯಲ್ಲಿ ತಹಸೀಲ್ದಾರ್ ಭೀಮರಾಯ ರಾಮಸಮುದ್ರ ಅವರ ಸಮ್ಮುಖದಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಪರಿಸರ ರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದಾಗಿದ್ದು, ಭವಿಷ್ಯದ ಪೀಳಿಗೆಗಾಗಿ ಪ್ರಕೃತಿಯನ್ನು ಸಂರಕ್ಷಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಅವರು ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಚಾರ್ಯ ಜೋಸೆಫ್ ಎಸ್. ಬೈಲಾ, ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ಪರಿಸರ ಸಂರಕ್ಷಣೆಯ ಪ್ರತಿಜ್ಞೆ ಸ್ವೀಕ–ರಿಸಿದರು. ವಿದ್ಯಾರ್ಥಿಗಳು ಹಸಿರು ಪರಿಸರ ನಿರ್ಮಾಣದ ಸಂದೇಶ ಸಾರುವ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿದರು.

# ನ್ಯಾಯಾಲಯ ಆವರಣದಲ್ಲಿ ಹಸಿರು ಹಬ್ಬ: ವಿಶ್ವ ಪರಿಸರ ದಿನಾಚರಣೆಗೆ ಸಸಿ ನೆಟ್ಟು ಚಾಲನೆ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಇಂದು ಮಸ್ಕಿಯ ಜೆ.ಎಂ.ಎಫ್.ಸಿ ನ್ಯಾಯಾಲಯದ ಆವರಣದಲ್ಲಿ ಅರ್ಥಪೂರ್ಣ ಹಾಗೂ ಪರಿಸರ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಅಪರ ಸಿವಿಲ್ ನ್ಯಾಯಾಧೀಶೆಯಾದ ಶ್ರೀಮತಿ ಸರಸ್ವತಿ ಹೋಟಿಕಲ್ ಅವರು ಸಸಿ ನೆಡುವ ಮೂಲಕ ಚಾಲನೆ ನೀಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಮಸ್ಕಿ ತಹಸಿಲ್ದಾರರಾದ ಮಂಜುನಾಥ



ಭೋಗಾವತಿ, ಪುರಸಭೆಯ ಅಧ್ಯಕ್ಷ ಸುರೇಶ ಅರಸೂರು,ಮುಖ್ಯಾಧಿಕಾರಿ ನರಸರಡ್ಡಿ,ಮಸ್ಕಿ ತಾಲೂಕು ವಕೀಲರ ಸಂಘದ ಅಧ್ಯಕ್ಷರಾದ ವೀರಭದ್ರಪ್ಪ, ಹಿರಿಯ ವಕೀಲರಾದ ದೇಸಾಯಿ ವಕೀಲರು,ರಾಮಣ್ಣ ಧೀನಸಮುದ್ರ,ಅರಣ್ಯ ಇಲಾಖೆಯ ಎಫ್.ಟಿ.ಆರ್.ಎಫ್ ಆಗಿರುವ ಸುರೇಶ ಸೇರಿದಂತೆ ಸಿಬ್ಬಂದಿಗಳಾದ ಪರಸಪ್ಪ ಭಂಡಾರಿ, ರಾಜಾಸಾಬ್ ಹಾಗೂ ಎಸ್.ಡಿ.ಎಂ ಶಾಲೆಯ ಸ್ಕೌಟ್ಸ್ ಆಯಂಡ್ ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸ್ಕೌಟ್ಸ್ ಆಯಂಡ್ ಗೈಡ್ಸ್ ಶಿಕ್ಷಕರಾದ ಹನುಮಂತ ಅವರು ಮಕ್ಕಳಿಗೆ ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಜಾಗೃತಿ ಮೂಡಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಅಪರ ಸಿವಿಲ್ ನ್ಯಾಯಾಧೀಶೆ ಶ್ರೀಮತಿ ಸರಸ್ವತಿ ಹೋಟಿ–ಕಲ್ ಅವರು, "ಮರಗಳು ಮಾನವ ಜೀವನದ ಉಸಿರಾಗಿವೆ. ಪರಿಸರವನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಬೇಕು" ಎಂದು ಹೇಳಿದರು.ತಹಸಿಲ್ದಾರ್ ಮಂಜುನಾಥ ಭೋಗಾವತಿ ಅವರು, "ಪ್ರಕೃತಿಯನ್ನು ಉಳಿಸುವ ಮೂಲಕ ಭವಿಷ್ಯದ ಪೀಳಿಗೆಗೆ ಆರೋಗ್ಯಕರ ವಾತಾವರಣವನ್ನು ನೀಡಬೇಕು" ಎಂದು ಕರೆ ನೀಡಿದರು.ವಕೀಲರ ಸಂಘದ ಅಧ್ಯಕ್ಷ ವೀರಭದ್ರಪ್ಪ ಅವರು ಮಾತನಾಡಿ, ಪರಿಸರ ಸಂರಕ್ಷಣೆಯಲ್ಲಿ ಪ್ರತಿಯೊಬ್ಬರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದ ಅಂತ್ಯದಲ್ಲಿ ನ್ಯಾಯಾಲಯ ಆವರಣದಲ್ಲಿ ವಿವಿಧ ಸಸಿಗಳನ್ನು ನೆಟ್ಟು ಹಸಿರು ಸಂರಕ್ಷಣೆಯ ಸಂಕಲ್ಪ ಕೈಗೊಳ್ಳಲಾಯಿತು. ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಪರಿಸರ ಜಾಗೃತಿ ಘೋಷಣೆಗಳನ್ನು ಕೂಗಿ ಕಾರ್ಯಕ್ರಮಕ್ಕೆ ಮತ್ತಷ್ಟು ಕಳೆ ತಂದರು.

# ಸಸಿ ನೆಟ್ಟು ಪೋಷಿಸುವ ಪ್ರವೃತ್ತಿ ಬೆಳೆಸಿಕೊಳ್ಳಿ – ಎಸ್. ವಸಂತ

ನೈಜ್ಯ ದೆಸೆ ನ್ಯೂಸ್

ಸಿರುಗುಪ್ಪ – ನಗರದ ಚಾಗಿ ನರಸಮ್ಮ ನರಸಯ್ಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ ಸಿ ಟ್ರಸ್ಟ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡನಾಟಿ ಮತ್ತು ಪರಿಸರ ಮಾಹಿತಿ ಕಾರ್ಯಕ್ರಮ ಹಮ್ಮಿಕೊಂಡು ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಸಿ ನಾಟಿ ಮಾಡಿ ಮಾತನಾಡಿದ ತಾಲೂಕು ಕ್ಷೇತ್ರ ಯೋಜನಾಧಿಕಾರಿ ಎಸ್. ವಸಂತ ಅವರು ಸಸಿನೆಟ್ಟು ಪೋಷಿಸುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು, ಶಾಲೆಯ ಕಟ್ಟಡ ಎಷ್ಟೇ ದೊಡ್ಡದು ಕಟ್ಟಿಸಿದರು ಕೂಡ ಅದರ ಸೌಂದರ್ಯ ಹೆಚ್ಚಿಸುವುದು ಗಿಡಮರಗಳನ್ನು ಬೆಳೆಸುವುದರಿಂದ ಆದ್ದರಿಂದ ವಿದ್ಯಾರ್ಥಿ ಜೀವನದಿಂದಲೇ ಪರಿಸರದ ಬಗೆಗಿನ ಕಾಳ–ಜಿಯನ್ನು ವಹಿಸಬೇಕು. ಶ್ರೀ ಕ್ಷೇತ್ರ ಧರ್ಮಸ್ಥಳ



ಗ್ರಾಮಾಭಿವೃದ್ಧಿ ಯೋಜನೆಯಿಂದ ಶಿಕ್ಷಣ ಕ್ಷೇತ್ರಕ್ಕೆ ಬಹಳಷ್ಟು ಕೊಡುಗೆಯನ್ನು ನೀಡುತ್ತಾ ಬಂದಿದೆ ಅದರಲ್ಲೂ ಜ್ಞಾನದೀಪ ಕಾರ್ಯಕ್ರಮದಡಿಯಲ್ಲಿ ಸರಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಡೆಸ್ಕ್ ಬೆಂಚ್ ಹೋದಗಣೆ, ಜ್ಞಾನದೀಪ ಶಿಕ್ಷಕರನ್ನು ನೀಡುವುದು, ಶಾಲಾ ಮಕ್ಕಳಿಗೆ ತಾಂತ್ರಿಕ ಮತ್ತು ವೃತ್ತಿ ಶಿಕ್ಷಣಕ್ಕೆ ಸುಜ್ಞಾನ ನಿಧಿ ಶಿಷ್ಯವೇತನ ನೀಡುವುದು ಹಾಗೂ ಶಾಲಾ ಕಾಂಪೌಂಡ್ ಮತ್ತು ಕಟ್ಟಡಗಳಿಗೆ ಅನುದಾನಗಳನ್ನು ನೀಡುತ್ತಾ ಸರ್ಕಾರಿ ಶಾಲೆಯ ಉಳಿವಿಗಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಶ್ರಮಿಸುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಲೆಯ ಮುಖ್ಯೋಪಾಧ್ಯಾಯರಾದ ಐ.ವೆಂಕಟಲಕ್ಷ್ಮೀಯವರು ಮಾತನಾಡಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಶಿಕ್ಷಣ ಕ್ಷೇತ್ರಕ್ಕೆ ಅನೇಕ ಕೊಡುಗೆಗಳನ್ನು ನೀಡುತ್ತಾ ಬಂದಿದೆ ಈ ದಿನ ನಮ್ಮ ಶಾಲೆಯಲ್ಲಿ ಪರಿಸರ ಮಾಹಿತಿ ಕಾರ್ಯಕ್ರಮವನ್ನು ಹಮ್ಮಿಕೊಂಡು ನಮ್ಮ ಶಾಲೆಯ ಮಕ್ಕಳಿಗೆ ಪರಿಸರದ ಬಗೆಗಿನ ಜಾಗೃತಿಯನ್ನು ಮೂಡಿಸುತ್ತಿರುವುದು ಸಂತೋಷ ತಂದಿದೆ ಎಂದರು. ಕಾರ್ಯಕ್ರಮದಲ್ಲಿ ಕನ್ನಡ ಶಿಕ್ಷಕರಾದ ಎಮ್. ಆಂಜನೇಯ, ಕೃಷಿ ಮೇಲ್ವಿಚಾರಕ ಎಸ್. ವೀರೇಶ , ಸೇವಾಪ್ರತಿನಿಧಿ ಅಂಬಿಕಾ, ಶಿಕ್ಷಕ ವೃಂದದವರು, ವಿದ್ಯಾರ್ಥಿ–ವಿದ್ಯಾರ್ಥಿನೀಯರು ಉಪಸ್ಥಿತರಿದ್ದರು.

# ಸೊಳ್ಳೆಗಳಿಂದ ಹರಡುವ ಮಾರಕ ಜಾಗೃತಿ ಕಾರ್ಯಕ್ರಮ – ಮೊಹಮ್ಮದ್ ಖಾಸಿಂ

ನೈಜ್ಯ ದೆಸೆ ನ್ಯೂಸ್

ಸಿರುಗುಪ್ಪ – ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸೊಳ್ಳೆಗಳಿಂದ ಹರಡುವ ಮಾರಕ ರೋಗಗಳ ಜಾಗೃತಿ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಮಲೇರಿಯಾ ಡೆಂಗಿ ಜ್ವರ ಚಿಕುನ್ ಗುನ್ಯಾ, ಮೆದುಳು ಜ್ವರ ಆನೆಕಾಲ ರೋಗ ಸೊಳ್ಳೆಗಳ ಸಂತಾನೋತ್ಪತ್ತಿ ತಾಣಗಳ ನಾಶ



ರಕ್ಷಣಾ ಕ್ರಮ ಮತ್ತು ಜಾಗೃತ ಅಕ್ರಮ ಕುರಿತು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮೊಹಮ್ಮದ್ ಖಾಸಿಂ ಆರೋಗ್ಯ ಶಿಕ್ಷಣ ನೀಡಿದರು ನಂತರ ಕಾಲೇಜಿನ ನೀರಿನ ತಾಣಗಳು ಆವರಣಗಳಲ್ಲಿನ ಘನ ತ್ಯಾಜ್ಯಗಳ ವೀಕ್ಷಣೆ ಲಾರ್ವ ಕಂಡುಬಂದ ತಾಣಗಳ ಸೂಕ್ತ ವಿಲೇವಾರಿ ಬಗ್ಗೆ ವಿದ್ಯಾರ್ಥಿಗಳಿಗೆ ಉಪನ್ಯಾಸಕ ಹುಲಿ ರಾಜ ರವರ ನೇತೃತ್ವದಲ್ಲಿ ಮಾರ್ಗದರ್ಶನ ನೀಡಲಾಯಿತು.

ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಶ್ರೀ ನಾಗರಾಜ್ ತಮ್ಮ ಮನೆಯ ಸುತ್ತಮುತ್ತಲಿನ ಸ್ಥಳವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಿ ಸೊಳ್ಳೆಗಳ ಉತ್ಪತ್ತಿ ತಾಣಗಳನ್ನು ನಾಶಗೊಳಿಸಿ ಎಂದು ಸಲಹೆ ನೀಡಿದರು ಉಪನ್ಯಾಸಕ ಸೋಮಶೇಖರ್ ರೆಡ್ಡಿ ಹುಲಿರಾಜ ಮತ್ತು ಮಲೇರಿಯಾ ಮೇಲ್ವಿಚಾರಕ ಶ್ರೀನಿವಾಸ್ ಗಣೇಶ್ ಮತ್ತು ವಿದ್ಯಾರ್ಥಿ ಸಮೂಹ ಹಾಜರಿದ್ದರು

# ಪರಿಸರ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ : ಡೋಣಿ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪ್ರಕೃತಿ ನಮಗೆ ಬದುಕಲು ಎಲ್ಲವನ್ನು ಉಚಿತವಾಗಿ ನೀಡಿದೆ. ಆದರೆ ನಾವು ಪ್ರಕೃತಿಗೆ ಕಸ ಕಡ್ಡಿ ವಿಷಕಾರಿ ಗಾಳಿ ಮತ್ತು ಮಾಲಿನ್ಯವನ್ನೇ ನೀಡುತ್ತಿದ್ದೇವೆ ಇದು ನಿಲ್ಲಬೇಕು ಪರಿಸರ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ನಿವೃತ್ತ ಶಿಕ್ಷಕ ರೋಷನ ಡೋಣಿ ಹೇಳಿದರು. ಪಟ್ಟಣದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಸ್ಥಳೀಯ ಜಮಾತೆ ಇಸ್ಲಾಮಿ ಹಿಂದ್ ಸಂಘಟನೆ ಹಾಗೂ ಹಸಿರು ಸಂಪದ ಬಳಗ ಇವರ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡ ಪರಿಸರ ಜಾಗೃತಿ ಜಾಥಾದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪರಿಸರ ಎಂದರೆ ಕೇವಲ ಕಾಡು ಮೇಡುಗಳಲ್ಲ ನಾವು ಉಸಿರಾಡುವ ಗಾಳಿ ಕುಡಿಯುವ ನೀರು ವಾಸಿಸುವ ಭೂಮಿ ಇವೆಲ್ಲವೂ ಪರಿಸರವೇ ಆಗಿದೆ. ಇವತ್ತು ನಾವು ಅತಿಯಾದ ಪ್ಲಾಸ್ಟಿಕ್ ಬಳಕೆ ಜೊತೆಗೆ ವಿಷಕಾರಿ ಗುಟ್ಕಾ ತಿಂದು ಎಲ್ಲೆಂದರಲ್ಲಿ ಉಗಿಯುವುದರಿಂದ ಪರಿಸರಕ್ಕೆ ಹಾನಿಯಾಗುತ್ತಿದೆ ಇದನ್ನು ತಡೆಯಲು ನಾವು ಸ್ವತಃ ನಮ್ಮಿಂದಲೇ ಈ ಕೆಲಸವನ್ನು ಆರಂಭಿಸಬೇಕಾಗಿದೆ ಎಂದರು. ಹಸಿರು ಸಂಪದ ಬಳಗದ ಸದಸ್ಯ ಗುಂಡೂರಾವ್ ಧನಪಾಲ







ಮಾತನಾಡಿ ನಮಗೆ ಸೌರಮಂಡಲದಲ್ಲಿ ವಾಸಿಸಲು ಇರುವ ಏಕೈಕ ಗ್ರಹ ಅದು ಭೂಮಿಯಾಗಿದೆ. ಇದರ ಮೇಲೆ ಜೀವಿಸುವ ಜೀವಿಗಳು ಚೆನ್ನಾಗಿ ಬದುಕಬೇಕೆಂದರೆ ಅವರ ಸುತ್ತಮುತ್ತಲಿನ ಪರಿಸರ ಹಸಿರಾಗಿರಬೇಕು ಆದರೆ ಇಂದು ನೈಸರ್ಗಿಕ ವಿಕೋಪ ಹಾಗೂ ಯುದ್ಧಗಳಿಂದ ಪರಿಸರ ನಾಶವಾಗುತ್ತಿದ್ದರೆ ಇನ್ನೊಂದು ಕಡೆ ಮನುಷ್ಯನ ಅತಿಯಾದ ಆಸೆಯಿಂದಾಗಿ ಪರಿಸರ ದಿನದಿಂದ ದಿನೆ ನಾಶವಾಗುತ್ತಿದೆ. ಇವತ್ತು ನಾವು ಗಿಡವನ್ನು ಕಡೆದು ನಾಡನ್ನು ಕಟ್ಟುವ ಕೆಲಸ ಮಾಡುತಿದ್ದೇವೆ ಆದ್ದರಿಂದಲೇ ಇಷ್ಟೆಲ್ಲ ಸಮಸ್ಯೆಗಳು ಸೃಷ್ಟಿಯಾಗಿವೆ. ಒಬ್ಬ ಮನುಷ್ಯನಿಗೆ ದಿನಕ್ಕೆ ಉಸಿರಾಡಲು ಕನಿಷ್ಠ 700 ರೂಪಾಯಿ ಮೌಲ್ಯದ ಆಕ್ಸಿಜನ್ ಅಗತ್ಯವಿದೆ ಅಂದರೆ ಪ್ರಕೃತಿ ನಮಗೆ ಉಚಿತವಾಗಿ ತಿಂಗಳಿಗೆ 21,000 ಮೌಲ್ಯದ ಆಕ್ಸಿಜನ್ ನೀಡುತ್ತದೆ ಇದರ ಮಹತ್ವ ನಮಗೆ ತಿಳಿದಿಲ್ಲ ದೇವರು ನಮಗೆ ನೈಸರ್ಗಿಕವಾಗಿ ಆಕ್ಸಿಜನ್ ಸಿಗುವಂತಾಗಲು ಗಿಡಮರಗಳನ್ನು ನೆಟ್ಟಿದ್ದಾನೆ ಆದರೆ ನಾವು ಅವುಗಳನ್ನು ನಾಶ ಮಾಡುತ್ತಿದ್ದೇವೆ ಇದರ ಕುರಿತು ನಾವು ಜಾಗೃತರಾಗಿ ನಮ್ಮ ಪರಿಸರವನ್ನು ರಕ್ಷಿಸುವ ಕೆಲಸಕ್ಕೆ ನಾವೆಲ್ಲರೂ ಮುಂದಾಗಬೇಕಾಗಿದೆ ಎಂದರು, ರಿಲಯನ್ಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎ.ಎಸ್. ನಮಾಜ–ಕಟ್ಟಿ ಅವರು ಮಾತನಾಡಿ ಪಟ್ಟಣದಲ್ಲಿ ಹಸಿರು ಸಂಪದ ಬಳಗ ಹಾಗೂ ಜಮಾತೆ ಇಸ್ಲಾಮಿ ಹಿಂದ್ ಸಂಘಟನೆಯ ಪದಾಧಿಕಾ–ರಿಗಳು ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕೆಲಸ ಮಾಡುತಿದ್ದಾರೆ ಇದೊಂದು ಶ್ಲಾಘನೀಯವಾದ ಕಾರ್ಯವಾಗಿದೆ ಇವರಿಗೆ ನಾವೆಲ್ಲರೂ ಸಹಕರಿಸೋಣ ಎಂದರು. ಇದೇ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಾರ್ವಜನಿಕರಿಗೆ ಸಸಿಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಉಪ ತಹಸಿಲ್ದಾರ್ ಅನೀಲ ಚೌಹಾಣ,ಧಾರ್ಮಿಕ ಮುಖಂಡ ಸೈಯದ ಶಕೀಲ ಅಹ್ಮದ್ ಖಾಜಿ.ಮೌಲಾನಾ ಅಜರುದ್ದೀನ ಖಾಸಮಿ, ಜಮಾತೆ ಇಸ್ಲಾಮಿ ಹಿಂದ್ ಅಧ್ಯಕ್ಷ ಮುಜಾಹೀದ ನಮಾಜಕಟ್ಟಿ,ಈದ್ಗಾ ಕಮಿಟಿ ಅಧ್ಯಕ್ಷ ಮಾಸೂಮಸಾಬ ಕೆಂಭಾವಿ, ಅಲ್ಲಾಭಕ್ಷ ನಮಾಜಕಟ್ಟಿ, ಇಬ್ರಾಹಿಂ ಮನ್ನೂರ, ಮುರ್ತುಜಾ ಮೇತ್ರಿ, ಖಾಸೀಮ ನಮಾಜಕಟ್ಟಿ, ಮೊಹಮ್ಮದ್ ಶಫೀಕ ಇನಾಮದಾರ,ಜಾವೀದ ಕೆಂಭಾವಿ, ಖಾಜಾಹುಸೇನ ಮುಲ್ಲಾ, ಮೈನುದ್ದೀನ ಕೊರ್ತಿ, ಇಸ್ಮಾಯಿಲ್ ಸಾಸಬಾಳ, ಮೈನು ಮಕಾಂದಾರ, ಯಾಸಿನ್ ಬಾಗಬಾನ,ಇಸ್ಮಾಯೀಲ ನಮಾಜ–ಕಟ್ಟಿ ಸೋಫಿ ಕಂಕರವಾಲೆ ಮತ್ತಿತರರು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಹೆಲ್ತ್ ಸ್ಯಾನಿಟರಿ ಇನ್ಸ್‌ಪೆಕ್ಟರ್”

ಹೆಲ್ತ್ ಸ್ಯಾನಿಟರಿ ಇನ್ಸ್‌ಪೆಕ್ಟರ್” (Health Sanitary Inspector) ವೃತ್ತಿಯ ಒಂದು ವರ್ಷದ ತರಬೇತಿ ಅವಧಿಯಲ್ಲಿ, ಅಭ್ಯರ್ಥಿಗೆ ಉದ್ಯೋಗ ಸಂಬಂಧಿತ ವೃತ್ತಿಪರ ಕೌಶಲ್ಯ (Professional Skill), ವೃತ್ತಿಪರ ಜ್ಞಾನ (Professional Knowledge) ಹಾಗೂ ಉದ್ಯೋಗಾರ್ಹತಾ ಕೌಶಲ್ಯಗಳು (Employability Skills) ಕುರಿತು ತರಬೇತಿ ನೀಡಲಾಗುತ್ತದೆ. ಇದಲ್ಲದೆ, ಆತ್ಮವಿಶ್ವಾಸವನ್ನು ವೃದ್ಧಿಸುವ ಉದ್ದೇಶದಿಂದ ಯೋಜನಾ ಕಾರ್ಯಗಳು, ಪಠ್ಯೇತರ ಚಟುವಟಿಕೆಗಳು ಹಾಗೂ ಕಾರ್ಯಕ್ಷೇತ್ರದಲ್ಲಿನ ತರಬೇತಿ (On-the-Job Training) ನೀಡಲಾಗುತ್ತದೆ.

ವೃತ್ತಿಪರ ಕೌಶಲ್ಯ ವಿಷಯದಲ್ಲಿ ಒಳಗೊಂಡಿರುವ ಪ್ರಮುಖ ಅಂಶಗಳು ಹೀಗಿವೆ:

ಕೋರ್ಸ್ ಪೂರ್ಣಗೊಂಡ ನಂತರ ತರಬೇತಿದಾರರು ವಿವಿಧ ವಯೋಮಾನದವರಿಗಾಗಿ ಅಗತ್ಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಪೌಷ್ಟಿಕಾಂಶ ಯೋಜನೆಗಳನ್ನು ರೂಪಿಸಲು, ಸಮತೋಲನ ಆಹಾರವನ್ನು ವಿನ್ಯಾಸಗೊಳಿಸಲು ಹಾಗೂ ವ್ಯಕ್ತಿಯ ಅಗತ್ಯಕ್ಕೆ ಅನುಗುಣವಾಗಿ ಕ್ಯಾಲೊರಿ ಮತ್ತು ಪೌಷ್ಟಿಕಾಂಶದ ಅವಶ್ಯಕತೆಗಳನ್ನು ಲೆಕ್ಕ ಹಾಕಿ ಸಲಹೆ ನೀಡಲು ಸಮರ್ಥರಾಗುತ್ತಾರೆ. ವಿವಿಧ ಪೋಷಕಾಂಶಗಳ ಕೊರತೆಯಿಂದ ಉಂಟಾಗುವ ರೋಗಗಳನ್ನು ಗುರುತಿಸಬಹುದು.

ಅವರು ರೋಗಗಳ ಲಕ್ಷಣಗಳನ್ನು ಪರಿಶೀಲಿಸಿ, ಆಹಾರ ಕಲಬೆರಕೆಯನ್ನು ಪತ್ತೆಹಚ್ಚಿ ವರದಿ ಮಾಡಬಹುದು ಹಾಗೂ ವಿವಿಧ ಆಹಾರ ಪದಾರ್ಥಗಳಿಗೆ ಸೂಕ್ತವಾದ ಆಹಾರ ಸಂರಕ್ಷಣಾ ವಿಧಾನಗಳನ್ನು ಸೂಚಿಸಬಹುದು. ನೀರು ಮತ್ತು ಅದರ ಗುಣಲಕ್ಷಣಗಳು, ನೀರಿನ ಮಾಲಿನ್ಯದ ಕಾರಣಗಳನ್ನು ಅರ್ಥಮಾಡಿಕೊಳ್ಳಬಹುದು. ನಗರ ಹಾಗೂ ಗ್ರಾಮೀಣ ಪ್ರದೇಶಗಳ ನೀರು ಸರಬರಾಜು ಮತ್ತು ನೀರು ಶುದ್ಧೀಕರಣ ವ್ಯವಸ್ಥೆಗಳನ್ನು ವಿವರಿಸಬಹುದು. ನೀರಿನ ಸಂರಕ್ಷಣೆಗೆ ಕೊಳಾಯಿ (Plumbing) ವ್ಯವಸ್ಥೆಗಳನ್ನು ಅಳವಡಿಸುವುದು ಹಾಗೂ ಮಳೆನೀರು ಸಂಗ್ರಹಣೆ (Rainwater Harvesting) ತಂತ್ರಗಳನ್ನು ಅಭಿವೃದ್ಧಿಪಡಿಸಬಹುದು.

ತರಬೇತಿದಾರರು ನೀರಿನ ಶುದ್ಧೀಕರಣ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಂಡು, ಪರಿಸರ ಮತ್ತು ಮಾನವ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ನಗರ ಅಥವಾ ಪಟ್ಟಣಗಳ ಮಾನವ ಮಲಮೂತ್ರ (Night Soil) ನಿರ್ವಹಣೆಯನ್ನು ಕೈಗೊಳ್ಳಲು ಸಮರ್ಥರಾಗುತ್ತಾರೆ. ಒಂದು ಪ್ರದೇಶ ಅಥವಾ ಸಣ್ಣ ಪಟ್ಟಣಕ್ಕೆ ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಯೋಜಿಸಬಹುದು.ಶೈಕ್ಷಣಿಕ ಅರ್ಹತೆ: ಸಾಮಾನ್ಯವಾಗಿ 10ನೇ ತರಗತಿ (SSLC) ಉತ್ತೀರ್ಣರಾಗಿರಬೇಕು.

ವಯೋಮಿತಿ: ಸಾಮಾನ್ಯವಾಗಿ 14 ರಿಂದ 40 ವರ್ಷಗಳೊಳಗಿನವರು ಅರ್ಜಿ ಸಲ್ಲಿಸಬಹುದು. (ಸಂಸ್ಥೆ ಮತ್ತು ಸರ್ಕಾರದ ನಿಯಮಗಳ ಪ್ರಕಾರ ವ್ಯತ್ಯಾಸ ಇರಬಹುದು.)

## ಬ್ರಿಲಿಯಂಟ್ ಶಾಲೆಯಲ್ಲಿ ವಿಶ್ವ ಪರಿಸರ ದಿನ ಆಚರಣೆ

ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ:ತಾಲೂಕಿನ ಮೈಲೇಶ್ವರದ ಶ್ರೀ ಮಾರುತಿ ಶಿಕ್ಷಣ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ಬಿಲಿಯಂಟ್ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನವನ್ನು ಶುಕ್ರವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು. ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ಪರಿಸರದ ಮಹತ್ವದ ಕುರಿತು ಪ್ರಬಂಧ, ಭಾಷಣ ಹಾಗೂ ರಸಪ್ರಶ್ನೆ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಎಸ್ ಕೆ ಮಹಾವಿದ್ಯಾಲಯದ ವಿಶ್ರಾಂತ ಪ್ರಾಚಾರ್ಯ ಆರ್ ವಿ ಜಾಲವಾದಿ ಅವರು ಪರಿಸರದ ಮಹತ್ವ ಅದರ ಸಂರಕ್ಷಣೆ ಹಾಗೂ ನಮ್ಮ ಜವಾಬ್ದಾರಿ ಕುರಿತು ಮಾತನಾಡಿದರು. ಸಂಸ್ಥೆಯ ಅಧ್ಯಕ್ಷ ಎನ್ ಬಿ ನಡುವಿನಮನಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಪ್ರತಿ ವಿದ್ಯಾರ್ಥಿಗೂ ಒಂದು ಸಸಿಯನ್ನು ಬೆಳಸಲು ಒತ್ತು ನೀಡಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆ ಉಪಾಧ್ಯಕ್ಷ ಆರ್ ಬಿ ನಡುವಿನಮನಿ, ಕಾರ್ಯದರ್ಶಿ ಎಂ.ಬಿ. ಮಡಿವಾಳರ, ನಿರ್ದೇಶಕ ಎಸ್ ಹೆಚ್ ಪಾಟೀಲ,ನಿರ್ದೇಶಕೀಯರಾದ ಎಲ್.ಎಂ.ಬಿರಾದಾರ,ಎನ್.ಎಸ್.ಗಡಗಿ, ಮುಖ್ಯ ಗುರುಗಳು, ಶಿಕ್ಷಕ ವೃಂದ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಇದ್ದರು.

# ದಸಾಪ ತಾಲೂಕ ಯುವ ಮತ್ತು ಮಹಿಳಾ ಘಟಕ ಪದಾಧಿಕಾರಿಗಳ ಆಯ್ಕೆ.

ನೈಜ್ಯ ದೆಸೆ ನ್ಯೂಸ್



ಸಿಂಧನೂರು: ನಗರದ ಸರಕಾರಿ ನೌಕರ ಭವನದಲ್ಲಿ ದಲಿತ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷರಾದ ಡಾ. ಹುಸೇನಪ್ಪ ಅಮರಾಪುರ ಅವರ ಅಧ್ಯಕ್ಷತೆಯಲ್ಲಿ ತಾಲೂಕ ಯುವ ಘಟಕ ಮತ್ತು ಮಹಿಳಾ ಘಟಕ ಪದಾಧಿಕಾರಿಗಳ ಆಯ್ಕೆ ಸಭೆಯನ್ನು ಹಮ್ಮಿಕೊಳ್ಳಲಾಯಿತು.

ತಾಲೂಕು ಯುವ ಘಟಕ ಅಧ್ಯಕ್ಷರಾದ ತಿಮ್ಮಪ್ಪ ನಾಯಕ ಕಲ್ಮಂಗಿ ಅವರ ಸಮ್ಮುಖದಲ್ಲಿ ವಿವಿಧ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ ಗದಗ ಹಾಗೂ ಯುವ ಘಟಕ ಸಿಂಧನೂರು. ಪದಾಧಿಕಾರಿಗಳು–: ಗೌರವ ಸಲಹೆಗಾರರಾಗಿ ಯಂಕಪ್ಪ ಚಿಕ್ಕಬೇರ್ಗಿ ಮುಖ್ಯ ಶಿಕ್ಷಕರು. ಅಧ್ಯಕ್ಷರು ತಿಮ್ಮಪ್ಪ ಕಲ್ಮಂಗಿ, ಕಾರ್ಯಾಧ್ಯಕ್ಷರು ಕೃಷ್ಣ ಗಾಂಧಿನಗರ, ಉಪಾಧ್ಯಕ್ಷರು ವೆಂಕಟೇಶ ಬುಕ್ಕನಟ್ಟಿ, ಹೊನ್ನೂರು ಕಟ್ಟಿಮನಿ, ಪ್ರಧಾನ ಕಾರ್ಯದರ್ಶಿ, ಡಾ. ಶರೀಫ್ ಹಸಮಕಲ್, ಸಹಕಾರ್ಯದರ್ಶಿ ದೇವೇಂದ್ರ ಹುಡಾ, ತಾಯಪ್ಪ ತಿಡಿಗೋಳ, ಸಂಘಟನಾ ಕಾರ್ಯದರ್ಶಿ ಸೂರ್ಯನಾರಾಯಣ ರಾಥೋಡ್, ಅಯ್ಯಪ್ಪ ಹರೆಟನೂರ, ಖಜಾಂಚಿ ಬಸವರಾಜ ಚಿಗರಿ, ಪತ್ರಿಕಾ ಸಲಹೆಗಾರರಾಗಿ ಸುಭಾಷ್ ಹರ್ವಾಪುರ, ದುಗ್ಗಪ್ಪ ಮಲ್ಲಾಪುರ, ಪಂಪಾಪತಿ ಹೂವಿನಭಾವಿ, ಸಾಹಿತ್ಯಿಕ ಸಲಹೆಗಾರರು ಶ್ರೀಶೈಲ ಹೆಚ್ ಎಂ ನಾಗರಾಜ ಕೋರಿ, ಕಾನೂನು ಸಲಹೆಗಾರರು ಗುರುನಾಥ ವಕೀಲರು, ನಿರ್ದೇಶಕರು ನಿರುಪಾದಿ ಸಾಸಲಮರಿ, ಪಂಪಾಪತಿ ಪೋ.ಪಾ. ತಿಡಿಗೋಳ, ನಾಗರಾಜ ನಾಯಕ, ಅಮರೇಶ ಹತ್ತಿಗುಡ್ಡ, ದೊಡ್ಡ ಹನುಮಂತ, ಹನಮಂತ ಕರ್ನಿ, ಲಕ್ಷ್ಮಣ ಹಂಚಿನಾಳ, ಹುಲುಗಪ್ಪ ಪೂಜಾರಿ, ಹರೀಶ ಒಳಬಳ್ಳಾರಿ, ಮುಖೇಶ್ ಭೋಗಾಪುರ, ನಿರುಪಾದಿ ಬೊಮ್ಮನಾಳ, ಮೊದಲಾದವರನ್ನು ಆಯ್ಕೆ ಮಾಡಲಾಯಿತು.

ಹಾಗೆಯೇ ತಾಲೂಕ ಮಹಿಳಾ ಘಟಕದ ಅಧ್ಯಕ್ಷರಾದ ಶೋಭಾ ತೋರಗಲ್ ಅವರ ಸಮ್ಮುಖದಲ್ಲಿ ವಿವಿಧ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ದಲಿತ ಸಾಹಿತ್ಯ ಪರಿಷತ್ತು ಮಹಿಳಾ ಘಟಕ ಸಿಂಧನೂರು ಗೌರವ ಸಲಹೆಗಾರರು ಲಕ್ಷ್ಮೀದೇವಿ, ಅಧ್ಯಕ್ಷರು ಶೋಭಾ ತೋರಗಲ್, ಉಪಾಧ್ಯಕ್ಷರು ಡಾ. ವಿಜಯಲಕ್ಷ್ಮಿ ಗುರಿಕಾರ್, ಪ್ರಧಾನ ಕಾರ್ಯದರ್ಶಿ ಕುಮಾರಿ ಜ್ಯೋತಿ, ಸಹ ಕಾರ್ಯದರ್ಶಿ ಧನಲಕ್ಷ್ಮಿ ಎಂ, ಖಜಾಂಚಿ ಮೇರಿ ಗ್ರೇಸಿ, ಸಾಹಿತ್ಯಿಕ ಸಲಹೆಗಾರರು ಶರಣಮ್ಮ ಮೇಟಿ ಕಾನೂನು ಸಲಹೆಗಾರರು ಹೀನಾ ಅಮ್ರೀನ್, ಸಾಂಸ್ಕೃತಿಕ ಸಲಹೆಗಾರರು ಶ್ಯಾಮಲಾ ಗೌಳಿ, ನಿರ್ದೇಶಕರು ರೇಣುಕಾ ದುರಗಪ್ಪ, ನಂದಿನಿ ಗೋಗಿ, ವಿಜಯಲಕ್ಷ್ಮಿ ಮಬ್ರುಮುಕರ್ ಅವರನ್ನು ಆಯ್ಕೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ದಲಿತ ಸಾಹಿತ್ಯ ಪರಿಷತ್ತು ಕಲಬುರ್ಗಿ ವಿಭಾಗದ ಸಂಯೋಜಕರಾಗಿ ಆಯ್ಕೆಯಾದ ಹೆಚ್.ಎಫ್. ಮಸ್ಕಿ, ರಾಯಚೂರು ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಡಾ.ಹುಸೇನಪ್ಪ ಅಮರಾಪುರ, ತಾಲೂಕಾಧ್ಯಕ್ಷರಾಗಿ ಆಯ್ಕೆಯಾದ ಅರುಣಕುಮಾರ್ ಭೇರಿಗಿ ಯುವ ಘಟಕದ ಅಧ್ಯಕ್ಷರಾಗಿ ಆಯ್ಕೆಯಾದ ತಿಮ್ಮಪ್ಪ ನಾಯಕ ಕಲ್ಮಂಗಿ ಮತ್ತು ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಶೋಭಾ ತೋರಗಲ್ ಅವರಿಗೆ ಎಲ್ಲಾ ಪದಾಧಿಕಾರಿಗಳು ಅಭಿನಂದಿಸಿ ಗೌರವಿಸಿದರು. ಪ್ರಧಾನ ಕಾರ್ಯದರ್ಶಿ ರಾಮಣ್ಣ ಹಿರೇಭೇರಿಗಿ ಮತ್ತು ನಿರ್ದೇಶಕರಾದ ಬಸವರಾಜ ದೇವಿಪುರ ಮೊದಲಾದವರಿದ್ದರು.

# ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ವಿಶ್ವ ಪರಿಸರ ದಿನಾಚರಣೆ



ನೈಜ್ಯ ದೆಸೆ ನ್ಯೂಸ್

ರಾಯಚೂರು: ನಮ್ಮ ಮುಂದಿನ ಪಿಳಿಗೆಯ ಭವಿಷ್ಯದ ದೃಷ್ಟಿಯಿಂದ ಪ್ರಕೃತಿ, ಹವಾಮಾನ, ಮಣ್ಣು, ನೀರು ಒಳಗೊಂಡಂತೆ ಭೂಮಿಯ ಮೇಲಿನ ನೈಸರ್ಗಿಕ ಸಂಪತ್ತನ್ನು ಉಳಿಸುವ ಮೂಲಕ ಪ್ರತಿ ಜೀವರಾಶಿಯು ಆತಂಕವಿಲ್ಲದೆ ಬದುಕುವ ಅವಕಾಶಗಳನ್ನು ನಾವೆಲ್ಲರೂ ಒದಗಿಸಬೇಕಿದೆ ಎಂದು ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ತಿಳಿಸಿದರು.

ವಿಶ್ವ ಪರಿಸರ ದಿನದ ಅಂಗವಾಗಿ ಕಛೇರಿ ಆವರಣದಲ್ಲಿ ಸಸಿ ನೆಟ್ಟು ಮಾತನಾಡಿ, ಮನುಷ್ಯ ಉಸಿರಾಡಲು ಆಮ್ಲಜನಕ ಪೂರೈಸುವ ಗಿಡಗಳನ್ನು ಪ್ರತಿ ಕುಟುಂಬವು ಬೆಳಸುವ ಸ್ವಯಂ ಜವಾಬ್ದಾರಿ ಹೊರುವ ಕಾರ್ಯ ಮಾಡಬೇಕಿದೆ, ಅಲ್ಲದೆ ಹೆಚ್ಚು ಗಿಡ-ಮರಗಳನ್ನು ಬೆಳೆಸುವುದರಿಂದ ವಾತಾವರಣದಲ್ಲಿ ಬಿಸಿಲಿನ ತಾಪಮಾನ ಏರಿಕೆಯು ನಿಯಂತ್ರಣವಾಗುವುದಲ್ಲದೆ ಭವಿಷ್ಯದಲ್ಲಿ ಕಡುಬಿಸಿಲಿನ ಪ್ರಕ್ರಿಯೆಯನ್ನು ಇಂದಿನಿಂದಲೆ ನಿಯಂತ್ರಿಸಲು ಮುಂದಾಗೋಣವೆಂದು ತಿಳಿಸಿದರು.

ರಾಷ್ಟ್ರೀಯ ಹವಮಾನ ಬದಲಾವಣೆ ಮತ್ತು ಮಾನವ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಹಾಗೂ ಡಿಎಮ್‌ಓ ಡಾ ಚಂದ್ರಶೇಖರಯ್ಯ ಸ್ವಾಮಿ ಮಾತನಾಡಿ ಸಸ್ಯರಾಶಿ ಕಾಡು, ವನಸಂಪತ್ತಿನ ಕರಗುವಿಕೆಯಿಂದ, ಹವಮಾನದ ಬದಲಾವಣೆಯು ಗಂಭೀರ ಸ್ವರೂಪ ಪಡೆದು ಬರಗಾಲ, ಚಂಡಮಾರುತ, ಅಧಿಕ ಬಿಸಿಲು, ಅಕಾಲಿಕ ಮಳೆ, ಮೇಘಸ್ಫೋಟದಂತಹ ಘಟನೆಗಳು ಜರುಗುತ್ತಿದ್ದು, ಇವೆಲ್ಲವೂ ಪರಿಸರದ ಅಸಮತೋಲನಕ್ಕೆ ಜ್ವಲಂತ ಸಾಕ್ಷಿಗಳಾಗಿವೆ. ಇಂದೆ ನಾವೆಲ್ಲ ಎಚ್ಚೆತ್ತು ಗಿಡಗಳ ಪೋಷಣೆ ಮಾಡಿ ಇಂಗಾಲದ ಹೆಜ್ಜೆ ಗುರುತನ್ನು (ಕಾರ್ಬನ್ ಫುಟ್ ಪ್ರಿಂಟ್) ಕಡಿಮೆ ಮಾಡೋಣ, ಪ್ಲಾಸ್ಟಿಕ್ ಬಳಕೆ ನಿಯಂತ್ರಿಸೋಣ, ಸಾಧ್ಯವಾದಷ್ಟು ಸಾರ್ವಜನಿಕ ಸಾರಿಗೆ ಉಪಯೋಗಿಸೋಣ, ಶುದ್ಧ ನೀರು ಅತ್ಯಮೂಲ್ಯ, ನೀರನ್ನು ಮಿತವಾಗಿ ಬಳಸೋಣ, ಗೃಹ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಂಗಡಿಸಿ ವಿಲೇವಾರಿ ಮಾಡೋಣ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ ಮಹಮ್ಮದ್ ಶಾಕೀರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಕಛೇರಿ ಅಧೀಕ್ಷಕರು ಶ್ರೀಧರ ಕುಲಕರ್ಣಿ, ಡಿವೈಹೆಚ್‌ಇಓ ಶಿವಪ್ಪ, ಹಿರಿಯ ಅರೋಗ್ಯ ನೀರಿಕ್ಷಣಾಧಿಕಾರಿ ತಾಯಪ್ಪ, ಪ್ರಯೋಗಶಾಲಾ ತಂತ್ರಜ್ಞ ಅಡಿವೆಪ್ಪ, ಬಿಹೆಚ್‌ಇಓ ನಾಗರಾಜ ಜಗತಾಪ್, ಸರೋಜಾ ಕೆ, ಹೆಚ್‌ಐಓ ಅಶೋಕ ಪಾಟೀಲ್, ಸರಿತಾ ಎಮ್‌ಟಿಎಸ್ ಸಂಧ್ಯಾ, ಎಫ್‌–ಎಲ್‌ಎ ಮಹೇಶ್, ಡಿಇಓ ಅಂಜು ವೆಂಕಟೇಶ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್



ಜಾವಳಗೇರಾ : ರಾಯಚೂರು ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರ ಇವರ ಸಂಯುಕ್ತ ಆಶ್ರಯದಲ್ಲಿ ಇಂದು ವಿಶ್ವ ಪರಿಸರ ದಿನಾಚರಣೆಯನ್ನು ಸಸಿ ನೆಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.ಈ ಸಂದರ್ಭದಲ್ಲಿ ಮಾತನಾಡಿದ ಡಾ. ಪ್ರೀತಾ, ವೈದ್ಯಾಧಿಕಾರಿಗಳು, ಜವಳಗೇರ, ಪ್ರತಿವರ್ಷ ಜೂನ್ 5 ರಂದು ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ. ಪರಿಸರ ಮಾಲಿನ್ಯ, ಜಾಗತಿಕ ತಾಪಮಾನ ಏರಿಕೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ನಾಶದಂತಹ ಗಂಭೀರ ಸಮಸ್ಯೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಮತ್ತು ಪ್ರಕೃತಿ ಸಂರಕ್ಷಣೆಗೆ ಎಲ್ಲರನ್ನು ಪ್ರೇರೇಪಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು. ಗಾಳಿ, ನೀರು, ಮಣ್ಣು ಹಾಗೂ ಜೀವ ವೈವಿಧ್ಯದ ಮಹತ್ವವನ್ನು ಅರಿಯಲು ಈ ದಿನಾಚರಣೆ ಪ್ರಮುಖ ವೇದಿಕೆಯಾಗಿದೆ ಎಂದರು.ನಂತರ ಮಾತನಾಡಿದ ಶ್ರೀಮತಿ ಗೀತಾ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು, ಪರಿಸರ ಸಂರಕ್ಷಣೆಗಾಗಿ ಮರಗಳನ್ನು ಬೆಳೆಸುವುದು, ಪ್ಲಾಸ್ಟಿಕ್ ಬಳಕೆಯನ್ನು ತಡೆಗಟ್ಟುವುದು, ನೈಸರ್ಗಿಕ ಸಂಪನ್ಮೂಲಗಳನ್ನು ಮಿತವಾಗಿ ಬಳಸುವುದು ಹಾಗೂ ಮರುಬಳಕೆಗೆ ಉತ್ತೇಜನ ನೀಡುವುದು ಅಗತ್ಯವಾಗಿದೆ ಎಂದು ಹೇಳಿದರು. ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ವಿರುದ್ಧ ಹೋರಾಡಲು ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು. “ಕಸದಲ್ಲಿ ರಸ” ಎಂಬ ತತ್ವದಡಿ ನಮ್ಮ ಸುತ್ತಮುತ್ತಲಿನ ವಸ್ತುಗಳನ್ನು ಮರುಬಳಕೆ ಮಾಡಿಕೊಂಡು ಪರಿಸರ ಸಂರಕ್ಷಣೆ ಮಾಡಬಹುದು. ಸ್ವಚ್ಛ ಪರಿಸರದಿಂದ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಬಹುದು. ಮುಂದಿನ ಪೀಳಿಗೆಗೆ ಹಸಿರು ಮತ್ತು ಆರೋಗ್ಯಕರ ಭೂಮಿಯನ್ನು ನೀಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು.ಅರಣ್ಯವಿಲ್ಲದೆ ಮಳೆ ಇಲ್ಲ, ಮಳೆ ಇಲ್ಲದೆ ಬೆಳೆ ಇಲ್ಲ. ಕಾಡಿನ ಹಸಿರು ನಮ್ಮೆಲ್ಲರ ಉಸಿರು. ಮರಗಳನ್ನು ಬೆಳೆಸಿ ಭೂಮಿಯ ತಾಪಮಾನ ಇಳಿಸೋಣ, ಪ್ಲಾಸ್ಟಿಕ್ ಬಳಕೆಯನ್ನು ತೊರೆದು ಪರಿಸರವನ್ನು ಮಾಲಿನ್ಯ ಮುಕ್ತಗೊಳಿಸೋಣ ಎಂದು ಅವರು ಮನವಿ ಮಾಡಿದರು.ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಬಾಲಪ್ಪ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು, “ಭೂಮಿಯನ್ನು ಉಳಿಸಿ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ, ಪ್ರಕೃತಿಯನ್ನು ರಕ್ಷಿಸಿ” ಎಂಬ ಸಂದೇಶ ನೀಡಿದರು. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಗಾರಿಕೆ. ನಮಗಿರುವುದು ಒಂದೇ ಭೂಮಿ, ಅದನ್ನು ಕಾಪಾಡುವುದು ನಮ್ಮ ಕರ್ತವ್ಯ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಡಾ. ಶಿವಾನಂದ, ರಾಧಾ (ಕಊಅಔ), ನಬಿನಾ (ಊಖಔ), ಪಾರ್ವತಿ (ಕಊಅಔ), ನಿಂಗಮ್ಮ (ಕಊಅಔ), ಬಿಕಾಶ್ ಚಂದ್ರ (ಐಖಔ), ದೀಪುರಾಯ್ (ಫಾರ್ಮಸಿ ಅಧಿಕಾರಿ), ಅನಿಲ್ ನಾಯಕ್ (ಖಅಂ), ವಿಜಯಲಕ್ಷ್ಮಿ, ಮರಿಯಮ್ಮ (ನರ್ಸಿಂಗ್ ಆಫೀಸರ್), ಚಂದ್ರಕಲಾ ಹಾಗೂ ಡಿ ದರ್ಜೆ ನೌಕರರು ಉಪಸ್ಥಿತರಿದ್ದರು.

# ಗಿಡ ಮರ ಬೆಳೆಸುವಲ್ಲಿ ಮನುಷ್ಯರಿಗೆ ಆಸಕ್ತಿ ಕಡಿಮೆಯಾಗಿದೆ : ನ್ಯಾ. ಹುಂಡಿ ಮಂಜುಳಾ ಶಿವಪ್ಪ

ನೈಜ್ಯ ದೆಸೆ ನ್ಯೂಸ್





ಗಿಡ ಮರ ಬೆಳೆಸುವಲ್ಲಿ ಮನುಷ್ಯರಿಗೆ ಆಸಕ್ತಿ ಕಡಿಮೆ ಯಾಗಿದೆ ಎಂದು ನ್ಯಾ. ಹುಂಡಿ ಮಂಜುಳಾ ಶಿವಪ್ಪ ಕಳವಳ ವ್ಯಕ್ತಪಡಿಸಿದರು .ಅವರಿಂದು ಪಟ್ಟಣದ ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ನ್ಯಾಯವಾದಿಗಳ ಸಂಘ, ತಾಲೂಕು ಆಡಳಿತ, ಅರಣ್ಯ ಇಲಾಖೆ, ಪೊಲೀಸ್ ಇಲಾಖೆ, ಪುರಸಭೆ, ಶಿಕ್ಷಣ ಇಲಾಖೆ, ಉಪ-ಕಾರಗೃಹ, ತೋಟಗಾರಿಕೆ ಇಲಾಖೆ, ಇವರುಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕಾನೂನು ಅರಿವು ಕಾರ್ಯಕ್ರಮವನ್ನು ನ್ಯಾಯಾಲಯದ ಸಂಕೀರ್ಣದಲ್ಲಿ ಸಸಿಗೆ ನೀರಾಕುವ ಮೂಲಕ ಉದ್ಘಾಟಿಸಿ ನಂತರ ಮಾತನಾಡಿದ ನ್ಯಾ. ಉಂಡಿ ಮಂಜುಳಾ ಶಿವಪ್ಪ ಇವರು ಸರಿಯಾದ ಸಮಯಕ್ಕೆ ಮಳೆ ಬಾರದೆ ಇದ್ದುದ್ದರಿಂದ ಈ ಭಾರಿ ಬಿಸಿಲಿನ ಬೇಗೆ ಹೆಚ್ಚಾಗಿದ್ದು , ಮಳೆಗಾಲ ಯಾವುದು ಮತ್ತು ಬೇಸಿಗೆ ಕಾಲ ಯಾವುದು ಎಂದು ತಿಳಿಯುತ್ತಿಲ್ಲ , ವರ್ಷ ಪೂರ್ತಿ ಬೇಸಿಗೆಗಾಲದಂತೆ ಕಾಣುತಿದ್ದು ಕಾಲಕ್ಕೆ ಸರಿಯಾಗಿ ಮಳೆ ಯಾಗಲಿಲ್ಲವೆಂದರೆ ಕೇವಲ ಮನುಷ್ಯರಿಗಷ್ಟೇ ಅಲ್ಲ ಪ್ರಾಣಿ ಪಶು ಪಕ್ಷಿಗಳಿಗೂ ಸಹ ತೊಂದರೆ ಯಾಗುತ್ತದೆ . ಅದಕ್ಕಾಗಿ ನಾವು ಪರಿಸರವನ್ನು ಕಾಪಾಡಬೇಕಿದೆ. ಮನುಷ್ಯ ತನ್ನ ದುರಾಸೆಗಾಗಿ ಪರಿಸರವನ್ನ ಹಾಳು ಮಾಡಿ ಕೊಳ್ಳುತ್ತಿದ್ದಾರೆ. ಎಲ್ಲಿ ಗಾಣಿಗರಿಕೆ ಮಾಡಬಾರದೋ ಅಲ್ಲೇ ಗಾಣಿಗರಿಕೆ ಮಾಡುತ್ತಿದ್ದಾರೆ ತಮ್ಮ ದುರಾಸೆಗಾಗಿ ಮರ ಗಿಡಗಳನ್ನ ನಿರ್ಧಾಕ್ಷಾಣ್ಯ ವಾಗಿ ಕಡೆದು ಹಾಕುತಿದ್ದಾರೆ. ಮರ ಗಿಡ ಗಳನ್ನ ಬೆಳೆಸುವಲ್ಲಿ ಮನುಷ್ಯ ರಿಗೆ ಆಸಕ್ತಿಇಲ್ಲ ಅದರ ಪರಿಣಾಮವನ್ನ ನಾವು ಅನುಭವಿಸುತ್ತಿದ್ದೇವೆ. ಈಗಲಾದರೂ ಹೆಚ್ಚೆತ್ತುಕೊಂಡು ಗಿಡ ಮರಗಳನ್ನ ಬೆಳೆಸಬೇಕು ಮತ್ತು ಪರಿಸರವನ್ನ ಕಾಪಾಡಿಕೊಳ್ಳಬೇಕು ಇದು ಕೇವಲ ಆಚರಣೆಯಾಗಿ ಉಳಿದು ಕೊಳ್ಳದೆ ಪರಿಸರ ಪ್ರೇಮವನ್ನ ಬೆಳೆಸಿ ಕೊಳ್ಳಬೇಕು ಇದನ್ನ ನಾವು ನಮ್ಮ ಮಕ್ಕಳಿಗೂ ಕಲಿಸಬೇಕು ಕೇವಲ ನಾವು ದೊಡ್ಡ ದೊಡ್ಡ ಕಟ್ಟಡಗಳನ್ನ ಕಟ್ಟೋದಕ್ಕೆ ಆಸಕ್ತಿ ತೋರುತ್ತಿದ್ದೇವೆ ಅದರೆ ಅದರ ಜೊತೆ ಜೊತೆಗೆ ಗಿಡ ಮರ ಗಳನ್ನ ನೆಟ್ಟು ಪರಿಸರವನ್ನ ಉಳಿಸಿಕೊಳ್ಳಬೇಕೆಂದರು .ಹೊಸದಾಗಿ ನಿರ್ಮಿಸುವ ಲೇಔಟ್ ಗಳಲ್ಲಿ ಗಿಡ ಮರ ಬೆಳೆಸಿದರೆ ಮಾತ್ರ ಇದಕ್ಕೆ ಅನುಮೋದನೆ ನೀಡಬೇಕು ಎಂದು ಪುರಸಭೆಯ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು. ಪ್ರದಾನ ಮಂತ್ರಿ ಮೋದಿಯವರು ಪರಿಸರ ಹೇಗೆ ಹಾಳಾಗುತ್ತಿದೆ ಅದನ್ನ ಯಾವರೀತಿ ಕಾಪಾಡಿಕೊಳ್ಳಬೇಕೆಂದು ಹೇಳಿದ್ದಾರೆ ಪರಿಸರವನ್ನು ಉಳಿಸುವಲ್ಲಿ ಕೇವಲ ನಮ್ಮ ನಿಮ್ಮ ಪಾತ್ರವಲ್ಲ ಎಲ್ಲರ ಪಾತ್ರವು ಬೇಕಿದೆ ಮರ ಗಳನ್ನು ಕಡಿಯುವಾಗ ನಾವು ನೂರುಸಲ ಆಲೋಚನೆ ಮಾಡಬೇಕು ಮರ ಗಿಡ ಗಳನ್ನ ಬೆಳೆಸುವಲ್ಲಿ ನಾವು ಹೆಚ್ಚು ಹೆಚ್ಚು ಆಸಕ್ತಿ ತೋರಬೇಕಿದೆ ಗಿಡ ಮರ ಬೆಳೆಸಿ ಪರಿಸರ ಉಳಿಸಿ ಎಂದರು . ಈ ಸಂದರ್ಭದಲ್ಲಿ ಬಿ.ಬಿ.ಜಕಾತೆ ಮೂರನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶರು, ಸಿಂಧನೂರು ಪಿಠಾಸೀನ ಲಿಂಗಸಗೂರು. ಕಾರ್ಯಕ್ರಮದ ಅಧ್ಯಕ್ಷತೆ ಭೂಪನಗೌಡ. ವಿ. ಪಾಟೀಲ್ ಅಧ್ಯಕ್ಷರು ತಾಲೂಕು ನ್ಯಾಯವಾದಿಗಳ ಸಂಘ, ಮುಖ್ಯ ಅತಿಥಿ ನ್ಯಾ. ಅಂಬಣ್ಣ ಕೆ. ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು ತಾಲೂಕು ಕಾನೂನು ಸೇವಾ ಸಮಿತಿ, ಸಿದ್ರಾಮ ರೆಡ್ಡಿ. ಹೆಚ್ಚುವರಿ ಸಿವಿಲ್ ಮತ್ತು ಜೆ. ಎಂ.ಎಫ್.ಸಿ. ನ್ಯಾಯಾಧೀಶರು, ಸಹಾಯಕ ಆಯುಕ್ತ ಬಸವಣ್ಣೆಪ್ಪ ಕಳಶೆಟ್ಟಿ , ಉಮೇಶ ಕಾರ್ಯಾನಿರ್ವಾಹಕ ಅಧಿಕಾರಿ ತಾ.ಪಂ , ಹೊಸಕೇರೆಪ್ಪ ಪೊಲೀಸ್ ನಿರೀಕ್ಷಕರು, ಸುಭಾಸಚಂದ್ರ ನಾಯಕ. ವಲಯ ಅರಣ್ಯಾಧಿಕಾರಿ , ಪ್ರಾದೇಶಿಕ ವಲಯ, ಭೀಮರಾಯ ಶಿಲ್ಪೇಕೆತ.ವಲಯ ಅರಣ್ಯಾಧಿಕಾರಿ ಸಾಮಾಜಿಕ ವಲಯ, ನಟರಾಜ ಮುಖ್ಯಧಿಕಾರಿ ಪುರಸಭೆ , ವೈ.ಎಮ್. ಹರವಿ ಅಧೀಕ್ಷಕರು, ಉಪ – ಕಾರಾಗೃಹ , ರಾಮಣ್ಣ ಉಪ-ವಲಯ ಅರಣ್ಯಾಧಿಕಾರಿ , ಸಾಮಾಜಿಕ ವಲಯ, ಲಕ್ಷ್ಮೀದೇವಿ ಅಬಕಾರಿ ನೀರಿಕ್ಷಕರು, ನಾಗರಾಜ ಗಸ್ತಿ ವಕೀಲರು, ಆಶೀಕ್ ಅಹ್ಮದ ವಕೀಲರು, ಮಹಾಲಿಂಗಪ್ಪ ವಕೀಲರು, ಚಂದ್ರಶೇಖರ ವಕೀಲರು, ಶಶಿಧರ ಸೋಮನಾಳ ವಕೀಲರು, ಶರಣಬಸವ ಪಟ್ಟಣಶೆಟ್ಟಿ ವಕೀಲರು, ಆದಪ್ಪ ವಕೀಲರು, ನ್ಯಾಯಾಲಯದ ಸಿಬ್ಬಂದಿಗಳು, ಅರಣ್ಯ ಇಲಾಖೆಯ

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.